(**Sri D. Devaraj Urs**)

before yesterday a good number of workers roughly about 1500 to 2000 came in a procession and they told the police authorities that they wanted to meet the Labour Minister. As soon as I received this information I got the representatives of the Labour to meet me and I discussed the matter. Their apprehension was that the management perhaps would not be in a position to open the mills on Mondy. Secondly they also apprehended that the salarise or the wages that were due to the workers for the last month might not be paid in time, that is, well within 10th. According to the Payment of Wages Act, that is the time allowed for the management to clear the wage bills. On these matters they were rather doubtful as to what the management would do and what their stand was. They requested me to persuade management to see that they would open the Mills on Monday and make the payment well within time. I have also advised the representatives of the workers in the meanwhile to think seriously about ways and means of effecting economy if possible, and sit with the management and discuss these matters. I have also reiterated the stand of the Government that the Government will always be willing to help both the management and labour to come to any kind of understanding so far as economy measures are concerned. This is the position.

Today or tomorrow I intend calling the management and advising them to see that the Mills are opened on Monday and with regard to payment to make payments within time. In case the management fails to do this, the Government, I am sorry to say, will have no other option but to proceed against the management as per law laid down.

Mr. SPEAKER.—That is a contingency.

GENERAL DISCUSSION ON THE FOURTH-FIVE YEAR PLAN

(*continued*)

† **ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).**—ನಿನ್ನೆ ದಿವಸ ಶರಾವತಿಯ ವಿದ್ಯುಚ್ಛಕ್ತಿಯನ್ನು ಬೇರೆ ದೇಶಗಳಿಗೆ ಮಾರದೆ ನಮ್ಮ ದೇಶದಲ್ಲಿ ಸಾಕಾದಷ್ಟು ಕೈಗಾರಿಕೆಗಳನ್ನು ಬೆಳೆಸಿ ಗ್ರಾಮಾಂತರ ಪ್ರದೇಶದಲ್ಲೂ ಕೂಡ ನೀರಾವರಿ ಬಾವಿಗಳಿಗೆ ಮತ್ತು ರೂರಲ್ ಇಂಡಸ್ಟ್ರಿಗಳಿಗೆ ವಿದ್ಯುಚ್ಛಕ್ತಿ ದೊರಕುವಂತೆ ಮಾಡಬೇಕು ಎಂದು ಹೇಳಿದೆ. ಈಗ ಮುಖ್ಯವಾಗಿರುವುದು ದವಸ, ವ್ಯವಸಾಯಕ್ಕೆ ಆದ್ಯತೆ ಕೊಡುವುದು. ರಷ್ಯಾದಲ್ಲಿ ಪ್ರತಿ 25 ಕಿಲೋ ವಾಟ್ಸ್ ಪವರ್ ಉತ್ಪತ್ತಿ ಆದರೆ ಅದರಲ್ಲಿ ಒಂದು ಕಿಲೋ ವ್ಯಾಟ್ ಪವರ್ ವ್ಯವಸಾಯಕ್ಕೆ ಕೊಡುತ್ತಾರೆ. ವ್ಯವಸಾಯಕ್ಕೆ ಅಷ್ಟು ಹೆಚ್ಚು ಗಮನ ಕೊಟ್ಟು ಎಲ್ಲ ವಿಧವಾದ ಅನುಕೂಲಗಳನ್ನೂ ಮಾಡಿಕೊಡುತ್ತಿದ್ದಾರೆ. ನಮ್ಮ ದೇಶವಲ್ಲಿ 5 ಸಾವಿರ ಹಳ್ಳಿಗಳನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲೆಕ್ಟ್ರಿಫೈ ಮಾಡುತ್ತಾರೆಂದು ಹೇಳುತ್ತಾರೆ. 27 ಸಾವಿರ ಹಳ್ಳಿಗಳು ಇರತಕ್ಕ ಈ ರಾಜ್ಯದಲ್ಲಿ ತಾವು ಈ ರೀತಿ ಮುಂದುವರಿದರೆ ಪ್ರತಿಯೊಂದು ಹಳ್ಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಇವೊತ್ತು ಅಮೇರಿಕಾ ಅಂಥ ಬೇರೆ ದೇಶಗಳನ್ನು ನೋಡಿದರೆ ಅಲ್ಲಿ 99 ಪರ್ಸೆಂಟು ಫಾರಂಗಳು ಎಲೆಕ್ಟ್ರಿಫೈ ಆಗಿವೆ. ಅಂತಹ ಒಂದು ಸ್ಥಿತಿ ಇರುವಾಗ 4-5ನೇ ಪಂಚವಾರ್ಷಿಕ ಯೋಜನೆಯಲ್ಲಿ ಆದರೂ ಕೂಡ, ಕನಿಷ್ಠ ಪಕ್ಷ 75 ಪರ್ಸೆಂಟು ಹಳ್ಳಿಗಳನ್ನು ಎಲೆಕ್ಟ್ರಿಫೈ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಸೂಚನೆ ಕೊಡುತ್ತೇನೆ.

ಇನ್ನು ಇಂಡಸ್ಟ್ರೀಸ್ ವಿಷಯದಲ್ಲಿ ಹಿಂದೆಯೇ ಹೇಳಿದ್ದೇನೆ. ಮೊದಲಿನಿಂದಲೂ ಕೂಡ ಇದಕ್ಕೆ ಹೆಚ್ಚಿನ ಗಮನ ಕೊಟ್ಟಿಲ್ಲ. ನಮ್ಮ ಸರ್ಕಾರದವರು ಮಾಡಿರುವುದು bad planning ಆ ಪ್ಲಾನಿಂಗ್ ಕೂಡ ಸರಿಯಾಗಿಲ್ಲ, ಮತ್ತು ಅದಕ್ಕೆ ಹೆಚ್ಚು ನಿಗಾ ಕೊಡುತ್ತಾ ಇಲ್ಲ. ಅಕ್ಕಪಕ್ಕದ ಮದ್ರಾಸ್ ಮತ್ತು ಆಂಧ್ರ ದೇಶಗಳನ್ನು ನೋಡಿದರೆ ಅವರು ಎಷ್ಟೋ ಮುಂದುವರಿದಿದ್ದಾರೆ. ಆಂಧ್ರದಲ್ಲಿ ಮತ್ತು ಮದ್ರಾಸಿನಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರೀಸ್ ಸ್ಟಾರ್ಟ್ ಮಾಡುತ್ತಾರೆ. ಅಲ್ಯೂಮಿನಿಯಮ್ ಫ್ಯಾಕ್ಟರೀ ಆಗಿವೆ. ಅಟಾಮಿಕ್ ಎನರ್ಜಿ ಕೂಡ ಉತ್ಪನ್ನ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗಿರುವಾಗ ಮೈಸೂರಿನವರು ಕಣ್ಣು ಮುಚ್ಚಿಕೊಂಡು ಕುಳಿತರೆ ಸಾಧ್ಯವೇ? ಹಿಂದೆ ಮಹಾರಾಜರ ಕಾಲದಲ್ಲಿ ಮೈಸೂರು ಮಾಡಲ್ ಸ್ಟೇಟ್ ಆಗಿತ್ತು. ಆದ್ದರಿಂದ ಇಂಡಸ್ಟ್ರೀಸ್ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈ ಶರಾವತಿ ಪವರ್ ನಮಗೆ ಬೇಕಾದಷ್ಟು ಇರುವಾಗ ಎಲೆಕ್ಟ್ರಿಕಲ್ ಇಂಡಸ್ಟ್ರಿ ಜಾಸ್ತಿ ಡೆವಲಪ್ ಆಗಬೇಕು. ಬಸವನಹುಳುವಿನ ವೇಗದಲ್ಲಿ ನಾವು ಹೋಗುತ್ತಾ ಇದ್ದೇವೆ. ಈ ರೀತಿ ಮುಂದುವರಿದರೆ ಶರಾವತಿ ಪವರ್ ಹಾರ್ನೆಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಇನ್ಸುಲೇಟರ್ಸ್ ಬೇಕು. ಇನ್ನು ಬೇರೆ ಬೇರೆ ಮೆಟೀರಿಯಲ್ಸ್ ಬೇಕು. ಇದಕ್ಕೆಲ್ಲಾ ಹೆಚ್ಚು ಗಮನಕೊಟ್ಟು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಬೆಳವಣಿಗೆ ಮಾಡಬೇಕು. ಅದೇರೀತಿ ಮೆಟಲರ್ಜಿಕಲ್ ಇಂಡಿಸ್ಟ್ರೀಸ್ಸು, ಅಲ್ಯೂಮಿನಿಯಮ್ ಸ್ಟೀಲ್ ಅಲಾಯ್ ಮೆಟೀರಿಯಲ್ಸ್ ಇವು ತಯಾರಾಗಬೇಕು. ಇವನ್ನು ತಯಾರು ಮಾಡದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಸ್ಟೀಲ್ ಕೋಟಾ ನೋಡಿದರೆ, ಬೇರೆ ದೇಶದಿಂದ ತರಬೇಕು. ನಾವೇ ಮಾಡಿಕೊಳ್ಳುವ ಅವಕಾಶ ಇರುವಾಗ ನಾವು ನಿಧಾನದಲ್ಲಿ ಹೋಗಬಾರದು. ಆದಷ್ಟು ಶೀಘ್ರದಲ್ಲಿ ನಮಗೆ ಬೇಕಾದುದನೆಲ್ಲಾ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಸಾಮರ್ಥ್ಯವನ್ನು ಹೊಂದಬೇಕು ಎಂದು ನಾನು ತಿಳಿಸುತ್ತೇನೆ.

ಸಣ್ಣ ಕಾರುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ವರ್ಷಗಳಿಂದಲೂ ಹೇಳುತ್ತಿದ್ದಾರೆ. ಆದರೆ ಅದು ಫಲಕಾರಿಯಾಗುತ್ತದೋ ಇಲ್ಲವೋ ಎನ್ನುವುದು ಅನುಮಾನವಾದ ಸಂಗತಿ. ಏಕೆಂದರೆ. ಈ ಕಾರ್ಖಾನೆಯನ್ನು ಬೇರೆ ದೇಶದವರು ಮಾಡುತ್ತಾರೆಂದು ವರ್ತಮಾನ ಕೇಳಿ ಬರುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಯಲ್ಲಿ ಇದ್ದಾರೆ. ಅವರಿಗೆ ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಒಂದು ಟೆಲಿಗ್ರಾಮ್ ಕಳಿಸಿ ಸದ್ಯ ಬೇರೆದೇಶಕ್ಕೆ ಹೋಗುವಂತದ್ದನ್ನು ತಪ್ಪಿಸುವ ಹಾಗೆ ಮಾಡಬೇಕೆಂದು ಹೇಳಬೇಕು.

10-00 A.M.

ಅದೇ ರೀತಿ ನಮ್ಮ ರಾಜ್ಯದಲ್ಲಿ ಒಂದು, ಮೂರು ಟನ್ ಶಕ್ತಿಯ ಟ್ರಕ್ಸ್ ತಯಾರು ಮಾಡುವ ಕಾರ್ಖಾನೆ ಯನ್ನು ಸಹ ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಮಿಕಲ್ ಇಂಡಸ್ಟ್ರೀಸ್ ವಿಷಯದಲ್ಲಿ ಹೇಳುವುದಾದರೆ, ನಮ್ಮ ಹಳೆಯ ಮೈಸೂರಿನಲ್ಲಿ ಬೆಳಗೊಳದಲ್ಲಿ ಒಂದೇ ಒಂದು ಕಾರ್ಖಾನೆ ಇದೆ. ಇತ್ತೀಚೆಗೆ ನಮ್ಮಲ್ಲಿ ಯಾವ ಫರ್ಟಿಲೈಸರ್ಸ್ ಕಾರ್ಖಾನೆಯೂ ಅಭಿವೃದ್ಧಿಯಾಗಿಲ್ಲ. ನಾನಾದರೂ ಇಲ್ಲಿ ಹೇಳುವುದೇನೆಂದರೆ ಈ ವಿಜ್ಞಾನ ಯುಗದಲ್ಲಿ ಕೆಮಿಕಲ್ಸ್ ಕಾರ್ಖಾನೆಯು ಬಹಳ ಮುಖ್ಯವಾದುದು. ಈ ಯುಗದಲ್ಲಿ ಫರ್ಟಿಲೈಸರಸ್ ಇಂಡಸ್ಟ್ರಿಯು ಅಭಿವೃದ್ಧಿಯಾಗದಿದ್ದರೆ, ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಈ ಕೆಮಿಕಲ್ಸ್ ಇಂಡಸ್ಟ್ರೀಸ್‌ಗಳನ್ನು ಹೆಚ್ಚು ಹೆಚ್ಚು ಸ್ಥಾಪನೆ ಮಾಡುವುದಕ್ಕೆ ಕೇಂದ್ರದ ನೆರವನ್ನು ಪಡೆದು ಪ್ರಯತ್ನಮಾಡಬೇಕೆಂದು ನಾನು ಇಲ್ಲಿ ಸೂಚನೆ ಮಾಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ವ್ಯವಸಾಯಕ್ಕೆ ಬೇಕಾಗಿರತಕ್ಕ ಪೆಸ್ಟಿಸೈಡ್ಸ್ ಇನ್‌ಸೆಕ್ಟಿಸೈಡ್ಸ್ ಫಂಗಿಸೈಡ್ಸ್ ಮೊದಲಾದವುಗಳನ್ನು ನಾವು ಹೊರಗಡೆಯಿಂದ ತರಿಸುವಾಗ ತುಂಬಾ ಹಣವನ್ನು ನಾವು ಹೊರಗೆ ಕೊಡಬೇಕಾಗುತ್ತದೆ. ಇದನ್ನೆಲ್ಲಾ ತಡೆಗಟ್ಟುವ ದೃಷ್ಟಿಯಿಂದ ಮತ್ತು ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದ ಇಲ್ಲಿ ಒಂದು ಕಾರ್ಖಾನೆಯು ಅಗತ್ಯ ಮತ್ತು ಅದಕ್ಕೆ ಗಮನ ಕೊಡಬೇಕೆಂದು ನಾನು ಸೂಚಿಸು ಮತ್ತು ಸಿರಾಮಿಕ್ ಇಂಡಸ್ಟ್ರೀಸ್, ಫೋರ್ಸಿಲಿನ್ ಫ್ಯಾಕ್ಟರಿಗಳನ್ನೆಲ್ಲಾ ಅಭಿವೃದ್ಧಿ ಮಾಡಿದ್ದಾರೆ. ನಮ್ಮ ದೇಶದಲ್ಲಿ ಬೇರೆ ಕೈಗಾರಿಕೆಗಳನ್ನೂ ಅಭಿವೃದ್ಧಿಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಭಾಗೇಶ್‌ಪುರದಲ್ಲಿ ರಿಫ್ರಾಕ್ಟರಿ ಬ್ರಿಕ್ಸ್ ಫ್ಯಾಕ್ಟರಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ನಡೆದಿದೆ ಎಂದು ಸಾಮಾನ್ಯವಾಗಿ 5-6 ವರ್ಷದಿಂದ ಈ ಕೂಗನ್ನು ಕೇಳುತ್ತಿದ್ದೇವೆ. ಆದರೆ ಶ್ರೀಮಾನ್ ಮಲ್ಲಪ್ಪನವರೂ ಸುಮ್ಮನೆ ಇದ್ದಾರೆ. ಇದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ. ಇದನ್ನು ಆದಷ್ಟು ಜಾಗ್ರತೆಗಾಗಿ ಮಾಡಬೇಕೆಂದು ಹೇಳುತ್ತೇನೆ. ಈಗ ಭೈರಾಪುರದಲ್ಲಿ ಕ್ರೋಮ್ ಮೈನ್ಸ್ ಇದೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇದಕ್ಕೆಲ್ಲಾ ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್‌ನವರು ಸರಿಯಾಗಿ ಗಮನಕೊಡುತ್ತಾ ಇಲ್ಲ. ಇರತಕ್ಕ ಅಧಿಕಾರಿಗಳು ಸಲೀಸಾಗಿ ಸಂಬಳ ತೆಗೆದುಕೊಂಡು ಇರುತ್ತಾರೆಯೇ ವಿನಾ ಯಾವ ಒಂದು ಪ್ರಯೋಜನವಾಗುತ್ತಾ ಇಲ್ಲ. ಇದನ್ನೆಲ್ಲಾ ತಡೆಗಟ್ಟಬೇಕು; ಮತ್ತು ಅಧಿಕಾರಿಗಳಿಗೆ ಸರಿಯಾದ ಉಪದೇಶಗಳನ್ನು ಕೊಟ್ಟು ಜಾಗ್ರತೆಯಾಗಿ ಫಲಪ್ರದವಾದ ಕೆಲಗಳನ್ನು ಮಾಡುವಂತೆ ತಿಳಿಸಬೇಕು.

ಮತ್ತು ರೂರರ್ ಇಂಡಸ್ಟ್ರೀಸ್ ವಿಷಯಲ್ಲಿ ಸರ್ಕಾರದವರು ಹೆಚ್ಚು ನಿಗಾ ಕೊಟ್ಟಿಲ್ಲ. ಅದನ್ನು ಮೊದಲನಿಂದಲೂ ನಿರ್ಲಕ್ಷ್ಯ ಮಾಡುತ್ತಾ ಬಂದಿದ್ದಾರೆ. ಇವತ್ತು ಜಪಾನ್ ದೇಶದವರು ಏನು ಮಾಡಿದ್ದಾರೆಂದರೆ, ಕೈಗಾರಿಕೆಗಳನ್ನು ಎರಡು ಭಾಗ ಮಾಡಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಅರ್ಬನ್ ಏರಿಯಾದಲ್ಲಿ ಸ್ಥಾಪನೆ ಮಾಡುತ್ತಾರೆ. Ancilliary industriesನ್ನು ರೂರರ್ ಏರಿಯದಲ್ಲಿ ಸ್ಥಾಪನೆ ಮಾಡುತ್ತಾರೆ ಮತ್ತು ಬಿಡಿ ಭಾಗಗಳನ್ನು ತಯಾರು ಕೂಡ ಮಾಡುವುದು ರೂರಲ್ ಏರಿಯಾದಲ್ಲಿ. ಇದರಿಂದ ವ್ಯವಸಾಯಗಾರರಿಗೂ ವೃತ್ತಿಯನ್ನು ಒದಗಿಸಿದಂತಾಗುತ್ತದೆ. ಅಂಥ ಒಂದು ಕಾನೂನು ನಿಯಮವನ್ನು ನಮ್ಮ ದೇಶದಲ್ಲಿ ಕೂಡ ಮಾಡಿದರೆ, ನಮ್ಮ ಗ್ರಾಮಾಂತರ ಪ್ರದೇಶಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನೆಲ್ಲಾ ಕಡ್ಡಾಯ ಪೂರ್ವಕವಾಗಿ ಮಾಡಲಿಕ್ಕಾಗಿ ನಾಲ್ಕನೆಯೋಜನೆಯಲ್ಲಿ ಸೇರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕೈಗಾರಿಕೆಗಳಲ್ಲಿ ಏರುಪೇರು ಆಗುತ್ತಿದೆ. ಸುಮ್ಮನೆ ಖರ್ಚು ಮಾಡುತ್ತಾರೆಯೇ ಹೊರತು ಅದರ ಅಭಿವೃದ್ಧಿಯು ಅಷ್ಟೊಂದು ಫಲಕಾರಿಯಾಗುವುದಿಲ್ಲ. ಅಲ್ಲಿ ಆಗತಕ್ಕ ಲೇಬರ್ ಪ್ರೊಡಕ್ಟಿವಿಟಿ ಏನಿದೆ, ಮತ್ತು ನಾವು ಮಾಡತಕ್ಕಂಥ ಫಿನಿಶ್‌ಡ್ ಗೂಡ್ಸ್ ಕ್ವಾಲಿಟಿ ಏನು, ಇದನ್ನೆಲ್ಲಾ ನಾವು ಯೋಚಿಸುವುದಿಲ್ಲ. ಅದೇ ರೀತಿ means of production and articles of consumption ಎಂದು ಎರಡು ಭಾಗ ಇದೆ. ಇದರಲ್ಲಿ ಒಂದಕ್ಕೊಂದು ಹೋಲಿಕೆ ಇರಬೇಕು. ಇದನ್ನೆಲ್ಲಾ ಲೆಕ್ಕ ಹಾಕಿಕೊಂಡು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಕೈಗಾರಿಕೆಗಳು ಮುಂದುವರಿಯಬೇಕಾದರೆ, ಸೈಂಟಿಸ್ಟ್ಸ್, ಎಕಾನಮಿಸ್ಟ್ಸ್, ಮತ್ತು ಟೆಕ್ನಿಶಿಯನ್ಸ್ ಜಾಸ್ತಿ ಇರಬೇಕು. ನಮ್ಮ ದೇಶದ ದೊಡ್ಡ ದೊಡ್ಡ ಬುದ್ಧಿವಂತರನ್ನು ಇದರಲ್ಲಿ ನೇಮಿಸಿಕೊಂಡು, ದೇಶದಲ್ಲಿ ಕೈಗಾರಿಕೆಯು ಒಂದು ಪ್ರಗತಿಪರ ಮಾರ್ಗವನ್ನು ಹೊಂದುವುದಕ್ಕೆ ಎಷ್ಟು ಸಾಧ್ಯವೋ, ಅಷ್ಟು ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಮಿನರಲ್ ಡೆವಲಪ್ ಮತ್ತು ಮಿನರಲ್ ಎಕ್ಸ್‌ಪ್ಲಾಯಿಟೇಶನ್ ವಿಷಯದಲ್ಲಿ ನಮ್ಮ ದೇಶ ಬಹಳ ಹಿಂದುಳಿದಿದೆ. ಇವತ್ತು ಈ ಇಲಾಖೆಯ ಕೆಲಸವೇನೆಂದರೆ, ಲಾರಿಗಳನ್ನು ಕೊಂಡುಕೊಂಡು ಲಾರಿಗಳನ್ನು ಮಾರುವುದು ಇಷ್ಟೆ. ನಮ್ಮ ದೇಶದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಮತ್ತು ಐರನ್ ಓರ್ ಇದ್ದರೂ ಕೂಡ ಅದನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲ. ಇದರಿಂದ ನಮ್ಮ ದೇಶದಲ್ಲಿರುವ ಮಿನರಲ್ಸ್‌ನ್ನು ಹೆಚ್ಚು ಹೆಚ್ಚು ಉಪಯೋಗಿಸಲು ಸರ್ವ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅರಸಿಕೆರೆಯ ಹತ್ತಿರ ಮ್ಯಾಂಗನೀಸ್ ಓರ್‌ಗೆ ಟ್ರಯಲ್ ಪಿಟ್ಸ್ ಮಾಡಿ ಬಿಟ್ಟು ಬಿಟ್ಟಿದ್ದಾರೆ. ಇದನ್ನೆಲ್ಲಾ ಹೆಚ್ಚು ಉತ್ಪತ್ತಿ ಮಾಡುವಂತೆ ನೋಡಬೇಕೆಂದು ಸಲಹೆ ಮಾಡುತ್ತೇನೆ.

ಇವತ್ತು ಕೋ-ಆಪರೇಟಿವ್ ಸಂಸ್ಥೆಗಳನ್ನು ನೋಡುವುದಾದರೆ, ಅಲ್ಲಿ ಹಣ ತಿನ್ನುವ ಹೆಗ್ಗಣಗಳು ಜಾಸ್ತಿಯಾಗಿ ಎಲ್ಲಾ ಕೆಟ್ಟುಹೋಗಿವೆ. ಇದನ್ನು ಸರ್ಕಾರದವರೇ ಸರಿಯಾದ ರೀತಿಯಲ್ಲಿ ಮ್ಯಾನೇಜ್ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು; ಮತ್ತು ಅಲ್ಲಿ ಆಗುವ ಅನ್ಯಾಯ, ಅಧರ್ಮ ಮೊದಲಾದುವುಗಳನ್ನು ತಪ್ಪಿಸಬೇಕು. ನಾಲ್ಕನೆಯ ಯೋಜನೆಯಲ್ಲಿ ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು ಕೋ-ಆಪರೇಟಿವ್ ಸಂಸ್ಥೆಗಳು ದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಕೆಲಸಮಾಡುವಂತೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ, ಇವತ್ತು ಜಮೀನು ಇದ್ದವರಿಗೇನೆ ಲೋನ್ ಸಿಕ್ಕುವುದಲ್ಲದೆ, ಬಡ ಜನರಿಗೆ, ಜಮೀನು ಇಲ್ಲದವರಿಗೆ, ಏನೊಂದು ತರದ ಸೌಲಭ್ಯ; ಸಹಾಯವೂ ಸಿಗುತ್ತಾ ಇಲ್ಲ. ಸಾಮಾನ್ಯವಾಗಿ ಯಾರು ವ್ಯವಸಾಯಗಾರರಿರುತ್ತಾರೋ ಅವರಿಗೆ ಯಾರಿಗೂ ಸಿಗುತ್ತಾ ಇಲ್ಲ. ರೈತನು ಉತ್ಪಾದನೆ ಮಾಡಬೇಕಾದರೆ, ಅವನಿಗೆ ಗೊಬ್ಬರಬೇಕು, ಬೀಜಬೇಕು, ಎತ್ತುಗಳನ್ನು ಕೊಂಡುಕೊಳ್ಳಲು ಹಣ ಬೇಕು; ಇದು ಪ್ರತಿಯೊಬ್ಬನಿಗೂ ಸಿಗುವ ಹಾಗೆ ಮಾಡಬೇಕು. ಈ ವಿಶಾಲ ದೃಷ್ಟಿಯನ್ನು ಇಟ್ಟುಕೊಂಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಇನ್ನು ರೋಡ್ ಇಂಪ್ರೂವ್‌ಮೆಂಟ್ ವಿಚಾರ. ಸಾಮಾನ್ಯವಾಗಿ ಇವತ್ತಿನ ದಿವಸ ಈ ರೂರಲ್ ಕಮ್ಯುನಿಕೇಶನ್ ರೋಡುಗಳನ್ನು ಸರಿಯಾಗಿ ಒಂದು ಸ್ಟ್ಯಾಂಡರ್ಡಿಗೆ ತರಬೇಕು. ಈ ರೀತಿ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಸರ್ಕಾರದವರು ಸಾಮಾನ್ಯವಾಗಿ ಟ್ಯಾಕ್ಸ್ ಹಾಕುತ್ತಾರೆಯೇ ಹೊರತು ಇಂಥ ಜನರಿಗೆ ಅನುಕೂಲವಾಗುವಂತೆ ಕೆಲಸಗಳನ್ನು ಮಾಡುವುದಿಲ್ಲ. ಇದರಿಂದ ಕೇಂದ್ರದ ನೆರವನ್ನು ಪಡೆದು ಇದನ್ನು ಸರಿಪಡಿಸಬೇಕೆಂದು ನಾನು ಸೂಚಿಸುತ್ತೇನೆ, ಉದಾಹರಣೆಗೆ ಒರಿಸ್ಸಾದಲ್ಲಿ ಅಲ್ಲಿಯ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಒಂದು ಬೆದರಿಕೆಯನ್ನು ಹಾಕಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಬಂದದ್ದೇ ಸಾಕು ಎಂದು ಸುಮ್ಮನಿರಬಾರದು. ಕೇಂದ್ರಕ್ಕೆ ಬೆದರಿಕೆಯನ್ನು ಹಾಕಬೇಕು. ಇಲ್ಲದಿದ್ದರೆ ನೀವು ರಾಜಿನಾಮೆಕೊಡಿ, ನಾವು ಎಲ್ಲರೂ ಕೊಡುತ್ತೇವೆ. ಅಗ ಕೇಂದ್ರದವರು ಕಣ್ಣು ತೆರೆಯುತ್ತಾರೆ. ಇವತ್ತು ಏನಾಗಿದೆ ಎಂದರೆ, ದೇಶದಲ್ಲಿ ಸಾಹುಕಾರರು ಇನ್ನೂ ಸಾಹುಕಾರರಾಗುತ್ತಿದ್ದಾರೆ, ಬಡವರು ಇನ್ನು ಹೆಚ್ಚು ಬಡವರಾಗುತ್ತಿದ್ದಾರೆ. ಸಾಹುಕಾರರಿಗೂ ಬಡವರಿಗೂ ಇರುವ ಅಂತರವನ್ನು ತಡೆಗಟ್ಟಬೇಕು. ಮತ್ತು ದೇಶದಲ್ಲಿ ಸತ್ಯವಂತರಿಗೆ, ಈಗ ಅವಕಾಶವಿಲ್ಲದಂತಾಗಿದೆ. ಈ ರೀತಿ ಮುಂದುವರಿದರೆ ನಮ್ಮ ದೇಶಕ್ಕೇನೇ ಕೆಡುಕು ಉಂಟಾಗುತ್ತದೆಂಬುದನ್ನು ನಾವು ಆಲೋಚನೆ ಮಾಡಬೇಕು. ಮೈಸೂರು ದೇಶಕ್ಕೆ ಕೊಯಮುತ್ತೂರು ಕಡೆಯವರು ಬಂದು ಖೋಟಾ ನೋಟುಗಳು ಚಲಾವಣೆಮಾಡುತ್ತಿದ್ದಾರೆ. ಅಂತಹವರಲ್ಲಿ ಒಬ್ಬರನ್ನಾದರು ಹಿಡಿದು ಗಲ್ಲಿಗೆ ಹಾಕಿದ್ದರೆ, ಈ ರೀತಿಯ ಕೆಲಸಗಳು ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತಿತ್ತು. ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುತ್ತೇನೆ.

ಟೂರಿಸಮ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಳೆಯ ಮೈಸೂರಿನಲ್ಲಿ ಹಂಪೆ, ಹಳೇಬೀಡು, ಬೇಲೂರು ಮುಂತಾದ ಇತಿಹಾಸ ಪ್ರಸಿದ್ಧವಾದ ಕ್ಷೇತ್ರಗಳಿವೆ. ಸರ್ ಮಿರ್ಜಾ ಕಾಲದಲ್ಲಿ ಇವುಗಳ ಅಭಿವೃದ್ಧಿಗಾಗಿ ಬೇಕಾದಷ್ಟು ಹಣ ಖರ್ಚುಮಾಡಿದರು. ಆದರೆ ಈಗಿನ ಸರ್ಕಾರದವರು ದೇವರನ್ನೇ ಮರೆತಿದ್ದಾರೆ, ಜನರನ್ನೇ ಕೈಬಿಟ್ಟಿದ್ದಾರೆ; ದುಡ್ಡನ್ನು ಮಾತ್ರ ಸರಿಯಾಗಿ ಕೊಡಿ ಎಂದು ಹೇಳುತ್ತಿರುತ್ತಾರೆ- ನಾಲ್ಕನೆಯ ಯೋಜನೆಯಲ್ಲಿ ಇವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಗಮನಕೊಟ್ಟು ಹೆಚ್ಚು ಹಣ ಖರ್ಚುಮಾಬೇಕೆಂದು ಹೇಳುತ್ತೇನೆ. ಈ ಕೆಳಗಿನ ಮೂರು ಸಾಲುಗಳನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ.

(1) to turn agriculture work into a variety of industrial work and machanise it ;

(2) to bring closely level of labour remuneration to farmers to that of waged and salaried workers in towns ;

(3) to improve living conditions of public services in the country.

ಇವನ್ನು ಸಾಧಿಸುವ ದೃಷ್ಟಿಯಲ್ಲಿ ಈ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ನಿಮ್ಮ ಶಕ್ತಿಯನ್ನು ನೋಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ, ಈ ಚತುರ್ಥ ಯೋಜನೆಯ ವಿಚಾರವಾಗಿ ಕೂಲಂಕಷವಾಗಿ ಚರ್ಚಿಸುವಂತಹ ಸುಯೋಗ ಒದಗಿದ್ದಕ್ಕಾಗಿ ನಾವೆಲ್ಲಾ ಸಂತೋಷ ಪಡಬಹುದಾಗಿದೆ. ನಮ್ಮ ದೇಶದ ಮೇಲೆ ಎರಡು ಕಡೆಯಿಂದ, ಎರಡು ದೇಶಗಳವರು ದಾಳಿ ಮಾಡಿದ್ದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುವ ಕಾಲ ಬಂತು. ಆದರೂ ಸಹ ನಮ್ಮ ದೇಶದ ಮುಖಂಡರು ಧೈರ್ಯದಿಂದ ನ್ಯಾಷನಲ್ ಎಮರ್ಜನ್ಸಿಯಿರುವಾಗಲೇ ಪಂಚವಾರ್ಷಿಕ ಯೋಜನೆಯ ಕರಡನ್ನು ತಯಾರು ಮಾಡಿದರು. ಈ ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುವ ಉದ್ದೇಶವೆಂದರೆ ಭಾರತ ದೇಶದಲ್ಲಿರುವ ಹಾಗೂ ಮೈಸೂರು ದೇಶದಲ್ಲಿರುವ ಹಳೆಯ ಜಾಡನ್ನು ತೆಗೆದು ಒಂದು ಹೊಸ ಚೇತನವನ್ನು ಉಂಟುಮಾಡಲಿಕ್ಕಾಗಿ, ಹಳ್ಳಿಗಳ ಹಾಗೂ ಗ್ರಾಮಾಂತರ ಪ್ರದೇಶಗಳ ಉತ್ತರೋತ್ತರದ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಈ ಯೋಜನೆಗಳನ್ನು ಇಟ್ಟುಕೊಂಡಿದ್ದಾರೆ. ಈ ಪಂಚವಾರ್ಷಿಕ ಯೋಜನೆಗಳು ಮುಂದುವರೆದಂತೆಲ್ಲಾ ಹಿಂದುಳಿದ ಪ್ರದೇಶಗಳಲ್ಲಿರುವ ಭೇದ ಭಾವಗಳು ತಾರತಮ್ಯಗಳು ಕಡಿಮೆಯಾಗುತ್ತವೆ. ವ್ಯವಸಾಯಕ್ಕೆ ಮತ್ತು ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳು ಮತ್ತು ಇತರ ವಸ್ತುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಿ ಹೆಚ್ಚಿನ ಉಪಯೋಗ ಪಡೆಯಲಿಕ್ಕೆ ಈ ಯೋಜನೆಯಿಂದ ಅವಕಾಶವಾಗುತ್ತದೆ. ಆಯಾ ಸ್ಥಳದಲ್ಲಿರುವ ಸಂಸ್ಥೆಗಳಿಗೆ ಮತ್ತು ಕಾರ್ಖಾನೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕು, ಅ ಮೂಲಕ ದೇಶದ ಜನರ ಬದುಕು ಬಂಗಾರವಾಗುವಂತೆ ಮಾಡಬೇಕೆನ್ನು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ವುದೇ ಈ ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶ. ಭಾರತ ದೇಶದಲ್ಲಿ ಹಾಗೂ ಮೈಸೂರು ದೇಶದಲ್ಲಿ ಸುಮಾರು ನೂರಕ್ಕೆ 70-80 ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಹಳ್ಳಿಗಳ ರಾಜ್ಯವೆಂದು ನಮ್ಮ ದೇಶಕ್ಕೆ ಹೆಸರು ಬಂದಿದೆ. ಹಳ್ಳಿಗಳ ಉದ್ಧಾರವಾದರೆ, ಹಳ್ಳಿಗಳಲ್ಲಿರುವ ಜನರು ಕ್ಷೇಮವಾಗಿದ್ದರೆ ದೇಶದ ಉದ್ಧಾರವಾದ ಹಾಗೆ. ರೈತನ ಆರ್ಥಿಕಮಟ್ಟ ಹೆಚ್ಚಿದರೆ ದೇಶದ ಆರ್ಥಿಕ ಮಟ್ಟ ಹೆಚ್ಚಿದ ಹಾಗೆ. ರೈತನ ಅಭಿವೃದ್ಧಿಯಾದರೆ ಸರ್ಕಾರದ ಕೆಲಸವೂ ಸುಲಭವಾಗಿ ಮುಂದುವರಿಯುತ್ತದೆ. ಆತನ ದಕ್ಷತೆ ಹೆಚ್ಚಿದರೆ ಹೆಚ್ಚು ಹಣ ಸಂಪಾದಿಸುತ್ತಾನೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಮಂಡ್ಯ ಜಿಲ್ಲೆಯಲ್ಲಿ ರೈತರಿಗೆ ಹೆಚ್ಚಿನ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟ ಕಾರಣ ಹೆಚ್ಚಿನ ಬೆಳೆಯನ್ನು ಬೆಳೆಯಲಿಕ್ಕೆ ಪ್ರಾರಂಭ ಮಾಡಿದರು. ಹೆಚ್ಚಿನ ಹಣವನ್ನು ಸಂಪಾದನೆ ಮಾಡಿದರು. ಜನರೇ ಸೇರಿಕೊಂಡು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದರು. ಇಂಜಿನಿಯರಿಂಗ್ ಕಾಲೇಜನ್ನು ಜನರು ತಮ್ಮ ಪ್ರಯತ್ನದಿಂದಲೇ ಪ್ರಾರಂಭ ಮಾಡಿದರು. ಈ ರೀತಿಯಲ್ಲಿ ನೋಡಿದರೆ ಪಂಚವಾರ್ಷಿಕ ಯೋಜನೆಯಿಂದ ದೇಶದ ಅಭಿವೃದ್ಧಿಯಾಗುತ್ತದೆ, ಜನರ ಆರ್ಥಿಕಮಟ್ಟ ಹೆಚ್ಚುತ್ತದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ರೂಪುಗೊಳ್ಳಬೇಕು ಎಂದು ಹೇಳುತ್ತೇನೆ. ನಮಗೆ 1965ನೇ ಇಸವಿಯಲ್ಲಿ ಕೊಟ್ಟ ಮೆಮೊರ್ಯಾಂಡಮ್‌ನಲ್ಲಿ ನಾಲ್ಕನೆ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದ ಪ್ಲಾನನ್ನು ತಯಾರು ಮಾಡುವಾಗ ಎಮರ್ಜನ್ಸಿ ಇತ್ತು ಎಂದು ಹೇಳಿದೆ. 500 ಕೋಟಿ ರೂಪಾಯಿಗಳನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಖರ್ಚು ಮಾಡಬೇಕೆಂದು ಇತ್ತು. ಆದರೆ ಈಗ ಕೊಟ್ಟಿರುವ ನೋಟ್ ಪ್ರಕಾರ 537 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆ ಎಂದು ಸೂಚಿಸಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ರಾಜ್ಯ 250 ಕೋಟಿ ಖರ್ಚುಮಾಡಬೇಕೆಂದು ಇತ್ತು. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 587 ಕೋಟಿ ರೂಪಾಯಿಗಳನ್ನು ಅಳವಡಿಸಿಕೊಳ್ಳಬೇಕೆಂದು ಇದರಲ್ಲಿ ಸೂಚಿಸಿದ್ದಾರೆ. 1966-67ನೇ ಸಾಲಿಗೆ 50-81 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಕಡಮೆಯಾಯಿತೆಂದು ಹೇಳುತ್ತೇನೆ. ಲೆಕ್ಕದ ಪ್ರಕಾರ 1966-67ನೇ ಸಾಲಿಗೆ 107 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಆದರೆ ಕೇವಲ 50.81 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದ್ದರಿಂದ ಈಗಿರುವುದನ್ನು 75 ಕೋಟಿ ರೂಪಾಯಿಗಾದರೂ ಏರಿಸಬೇಕೆಂದು ಹೇಳುತ್ತೇನೆ. ಕೆಲವೊಂದು ಕಾರ್ಯಕ್ರಮಗಳು ಬಹಳ ನಿಧಾನವಾಗಿ ನಡೆಯುತ್ತಿವೆ. ಉದಾಹರಣೆಗೆ ಹೇಳಬೇಕೆಂದರೆ, ಮೈನರ್ ಇರಿಗೇಷನ್, ಲಿಫ್ಟ್ ಇರಿಗೇಷನ್‌ಗೆ ಬಹಳ ಕಡಮೆ ಹಣ ಇಟ್ಟಿದ್ದಾರೆ. ಇವುಗಳಿಗೆ ಹೆಚ್ಚು ಹಣ ಇಟ್ಟು ಹೆಚ್ಚಿನ ಪ್ರಾಜೆಕ್ಟುಗಳನ್ನು ತೆಗೆದುಕೊಂಡರೆ ಜನರು ಸಹ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಅಲ್ಲದೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಲೆಕ್ಕದ ಪ್ರಕಾರ 107 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕಾಗದಿದ್ದರೂ, ಇನ್ನು 50 ಕೋಟಿ ರೂಪಾಯಿಗಳನ್ನಾದರೂ ಹೆಚ್ಚು ಒದಗಿಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಮೈನರ್ ಇರಿಗೇಷನ್ ವಿಚಾರ ಹೇಳುವಾಗ, ಮೂರನೆ ಯೋಜನೆಯಲ್ಲಿ ಈ ಬಾಬಿಗೆ 1,600 ಲಕ್ಷ ಒದಗಿಸಿದ್ದರು. ನಾಲ್ಕನೇ ಯೋಜನೆಯಲ್ಲಿ 4,000 ಲಕ್ಷ ಒದಗಿಸಿದ್ದಾರೆ. ಇದರಲ್ಲಿ 1966-67ನೇ ಸಾಲಿಗೆ 620 ಲಕ್ಷ ಒದಗಿಸಿದ್ದಾರೆ, ಲೆಕ್ಕದ ಪ್ರಕಾರ 800 ಲಕ್ಷ ಒದಗಿಸಬೇಕಾಗಿತ್ತು. ಈಗಾಗಲೆ ಕೆಲಸಕಾರ್ಯಗಳು ತಡವಾಗಿದೆ. ಉದ್ದೇಶಕ್ಕಿಂತಲೂ ಕಡಿಮೆ ಹಣ ಒದಗಿಸಿರುವುದರಿಂದ ದೇಶದ ಅಭಿವೃದ್ಧಿ, ರೈತರ ಅಭಿವೃದ್ಧಿ ಕುಂಠಿತವಾಗುತ್ತದೆ. ದೇಶದ ಅಭಿವೃದ್ಧಿಗಾಗಿ ಕೆಲಸ ಮಾಡುವ ರೈತರ ಕಡೆ ಸರ್ಕಾರದವರು ಗಮನ ಹರಿಸಬೇಕು. ಆದ್ದರಿಂದ ಈ ಬಾಬಿಗೆ 800 ಲಕ್ಷ ಇಡಬೇಕೆಂದು ಹೇಳುತ್ತೇನೆ. ಮೂರನೆ ಪ್ಲಾನ್‌ನಲ್ಲಿ ಇರಿಗೇಷನ್ ಮತ್ತು ಪವರ್‌ಗಾಗಿ ಶೇಕಡ 40-70 ಇಟ್ಟಿದ್ದಾರೆ. ಹಾಗೆಯೇ ಅಗ್ರಿಕಲ್ಚರ್ ಮತ್ತು ಕಮ್ಯುನಿಟಿ ಡೆವಲಪ್‌ಮೆಂಟ್‌ಗೆ 25 ಪರ್ ಸೆಂಟ್ ಒದಗಿಸಿದ್ದಾರೆ. ವ್ಯವಸಾಯದ ಬಾಬು ಬಹಳ ಮುಖ್ಯವಾಗಿರುವುದರಿಂದ ಇದಕ್ಕೆ 40 ಪರ್ ಸೆಂಟ್ ಇಡಬೇಕಾಗಿತ್ತು. ಹಿಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಪಡೆದ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ಸಹ ಕೃಷಿ ಬಾಬಿಗೆ ಹೆಚ್ಚು ಹಣವನ್ನು ಈ ಸಾಲಿಗೆ ಇಟ್ಟಿಲ್ಲ. ಆದ್ದರಿಂದ ಆಹಾರಕ್ಕೋಸ್ಕರವಾಗಿ ತೊಳಲಾಡಬೇಕಾಗಿದೆ. ಈ ವರ್ಷ ಬರಗಾಲ ಬೇರೆ ಬಂದಿದೆ. ನಾವು ಇಟ್ಟುಕೊಂಡಿರುವ ಒಂದು ಗುರಿಯನ್ನು ಮುಟ್ಟಲಿಕ್ಕಾದರೂ ಸಹ ಕೃಷಿ ಬಾಬಿನ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ಹೇಳುವುದು, ಇದುವರೆಗೆ ಕೃಷಿಗಾಗಿ ಕೊಟ್ಟ ಗಮನ ಸಾಲದಾಗಿದೆ. ಆದ್ದರಿಂದ ಕೃಷಿ ಬಾಬಿಗೆ ಇಟ್ಟಿರುವ 25 ಪರ್ಸೆಂಟ್‌ನ್ನು 40 ಪರ್‌ಸೆಂಟ್‌ಗೆ ಹೆಚ್ಚಿಸಿದರೆ ಸರ್ವತೋಮುಖವಾದ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾದೀತು ಎಂದು

ಹೇಳುತ್ತೇನೆ. ಕೃಷಿ ವಿಚಾರ ಹೇಳುವಾಗ ಇನ್ನೊಂದು ವಿಚಾರ ಮಾಡಬೇಕು. ಜಿಲ್ಲಾವಾರು ಸ್ಕೀಮುಗಳನ್ನು ತಯಾರಿಸುವುದು ಅಗತ್ಯವೆಂದು ಕಾಣುತ್ತದೆ. 19 ಜಿಲ್ಲೆಯೊಳಗೂ ಸರ್ವೆಮಾಡಿಸಿ ಯಾವ ಯಾವ ಭಾಗದಲ್ಲಿ ಏನೇನು ಬೆಳೆ ಬೆಳೆಯಬಹುದು, ಅಲ್ಲಿಗೆ ಏನೇನು ಸೌಕರ್ಯಗಳು ಬೇಕು ಎಂಬುದರ ಬಗ್ಗೆ ವಿವರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿಯೇ ಅದನ್ನೆಲ್ಲಾ ಸಂಪೂರ್ಣವಾಗಿ ನಿರ್ವಹಿಸಲಿಕ್ಕೆ ದೃಡ ನಿರ್ಧಾರ ಮಾಡಬೇಕು. ಆಗ ಮಾತ್ರ ಆಹಾರದಲ್ಲಿ ಸ್ವಾವಲಂಬಿಗಳಾಗುವುದಕ್ಕೆ, ಮತ್ತು ನಮ್ಮ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ,

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಇಷ್ಟು ಮಹತ್ವವಾದ ನಾಲ್ಕನೆ ಪಂಚವಾರ್ಷಿಕ ಯೋಜನೆ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಯಾರೊಬ್ಬ ಮಂತ್ರಿಯೂ ಸಹ ಪಾಯಿಂಟ್‌ಗಳನ್ನು ಗುರುತು ಮಾಡಿಕೊಳ್ಳಲಿಕ್ಕೆ ಇಲ್ಲಿ ಇಲ್ಲ. ಇದರಿಂದ ಇವರು ಎಷ್ಟು ನಿರ್ಲಕ್ಷ್ಯದಿಂದ ಇದ್ದಾರೆ ಎಂಬುದು ಗೊತ್ತಾಗುತ್ತದೆ.

Mr. SPEAKER.—Order, Order.

ಶ್ರೀ ಎಸ್. ಸುಬ್ಬಯ್ಯನಾಯಕ್.—ನೀರಾವರಿ ವಿಷಯ ಹೇಳಬೇಕಾದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಅಪ್ಪರ್ ಕೃಷ್ಣಾ ಮತ್ತು ಗೋದಾವರಿ ಬೇಸಿನ್ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೆಂದು ಚರ್ಚಿಸಿ ಒಮ್ಮತದ ನಿರ್ಣಯವನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ನೀರಾವರಿ ಕೆಲಸ ನೂರಕ್ಕೆ 7-8 ಇದೆ, ಮದ್ರಾಸಿನಲ್ಲಿ 40 ಪರ್ಸೆಂಟ್ ಇದೆ. ನಮ್ಮಲ್ಲಿಯೂ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಸರ್ಕಾರದವರು ನಿರ್ಧಾರ ಕೈಗೊಂಡಿದ್ದಾರೆ; ಮತ್ತು ಆ ಪ್ರಕಾರವಾಗಿ ಕೆಲಸ ಮಾಡುತ್ತಲೂ ಇದ್ದಾರೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಬೇಕೆಂದು ಸರ್ಕಾರ ಮನಸ್ಸು ಮಾಡಿದರೂ ಕೇಂದ್ರ ಸರ್ಕಾರ ಧಾರಾಳವಾಗಿ ಹಣವನ್ನು ಕೊಡುತ್ತಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ 200 ಇಂಚು ವರೆಗೂ ಮಳೆ ಬೀಳುತ್ತದೆ. ಆದರೆ ಆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಹೆಚ್ಚು ಮಳೆ ಬೀಳುವ ಪ್ರದೇಶವಾಗಿರುವುದರಿಂದ ಅಣೆಕಟ್ಟುಗಳನ್ನು ಕಟ್ಟಿದರೆ ಅದರಿಂದಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿ ಲಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವನ್ನು ಪಡೆಯಬಹುದು; ಅದ್ದರಿಂದ ಸಣ್ಣ ನೀರಾವರಿ ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

1959ನೇ ಇಸವಿ ಫೆಬ್ರುವರಿ ತಿಂಗಳಿನಲ್ಲಿ ದೊಡ್ಡಯ್ಯ ಕಮಿಟಿ ಎಂದು ಮಾಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ನೀರಾವರಿ ಸೌಕರ್ಯಗಳನ್ನು ಮಾಡಬಹುದು ಎನ್ನುವುದರ ವಿಚಾರದಲ್ಲಿ ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರ ಮೇಲೆ ಏನೂ ಕಾರ್ಯಕ್ರಮ ಮಾಡಿಲ್ಲ, ಏನೂ ಪ್ರಾರಂಭ ಮಾಡಿದ ಹಾಗೂ ಕಾಣುವುದಿಲ್ಲ. ಈ ಕಮಿಟಿಯವರು ಹೇಳಿರುವ ಸಲಹೆಗಳನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲಿ ಯಾವ ವಿಧದಿಂದ ನೋಡಿದರೂ ಬರೇ ಮೈನರ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವೆಂದರೆ ಶೀಘ್ರ ಫಲ ಕೊಡುತ್ತದೆ ಮತ್ತು ಖರ್ಚು ಕಡಮೆ ಬೀಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಅಲ್ಲಿ ಒಂದು, ಎರಡು, ಮೂರು ಬೆಳೆಯವರೆಗೂ ಬತ್ತದ ಬೆಳೆ ತೆಗೆದು ಹೆಚ್ಚಿನ ಆಹಾರವನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ವ್ಯವಸಾಯ ಏಕೆ ವಿಫಲ ಆಗಿದೆ ಎಂಬುದನ್ನು ಪರಿಶೀಲಿಸಿ ಇದನ್ನು ಹೆಚ್ಚು ಪ್ರಬಲಗೊಳಿಸುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ಕೃಷಿಯನ್ನು ಕೇಂದ್ರವಾಗಿಟ್ಟುಕೊಂಡು ಕೈಗಾರಿಕೆ ಅಥವಾ ಇತರ ಸಾಮಾಜಿಕ ಕಾರ್ಯಗಳು ಮುಂದುವರಿಯಬೇಕು. ಅಲ್ಲದೆ ಹೋದರೆ ಎಷ್ಟು ಪಂಚವಾರ್ಷಿಕ ಯೋಜನೆಗಳನ್ನು ಮಾಡಿದರೂ ಏನೂ ಪ್ರಯೋಜನವಾಗಲಾರದು, ಅದು ನಿರರ್ಥಕ ಎಂದು ಹೇಳಬಹುದು.

ಮೊನ್ನೆಯ ದಿನ ಕೇಂದ್ರ ಸರ್ಕಾರದ ಯೋಜನಾ ಸಚಿವರಾದ ಶ್ರೀ ಅಶೋಕಾ ಮೆಹತಾ ಅವರು ಹೇಳಿದಂತೆ ದೃಢ ಮನಸ್ಸು ಮಾಡಿ, ತ್ಯಾಗ ಮನಸ್ಸು ಮಾಡಿ ಸರ್ಕಾರಕ್ಕೆ ಕರ ಕಂದಾಯಗಳನ್ನು ಸರಿಯಾಗಿ ಕೊಡಬೇಕು. ಕರವನ್ನು ವಸೂಲು ಮಾಡುವಾಗ ಎಲ್ಲಿ ಹೆಚ್ಚಿಗೆ ಉತ್ಪತ್ತಿ ಇದೆಯೋ ಅಲ್ಲಿಂದ ವಸೂಲು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಬಡವರಿಗೆ ತೊಂದರೆಯನ್ನುಂಟು ಮಾಡುವ ಯಾವ ಯೋಜನೆಯನ್ನೂ ಮಾಡಬಾರದು ಎಂದು ಹೇಳುತ್ತೇನೆ.

ಕೃಷಿ ವಿಚಾರವನ್ನು ಹೇಳುತ್ತ ಹೋಗುವಾಗ ಕೆಲವು ಜಿಲ್ಲೆಗಳಲ್ಲಿ ಅರಣ್ಯ ಬೆಳೆಯುತ್ತದೆ. ಅಂಥ ಜಿಲ್ಲೆಗಳಲ್ಲಿ ಕಾಡನ್ನು ಬೆಳೆಸುವ ಗೊಡವೆಗೆ ಹೋಗದಂತೆ ಕಾಡು ಇರುವ ಭೂಮಿಯನ್ನು ಕೃಷಿಗೆ ಕೊಟ್ಟರೆ ಭೂಮಿ ಬಹಳ ಫಲವತ್ತಾಗಿ ಇರುವುದರಿಂದ ಚೆನ್ನಾಗಿ ಕೃಷಿ ಮಾಡಬಹುದು. ಬೋಳು ಭೂಮಿ ಇರುವ ಜಿಲ್ಲೆಗಳಲ್ಲಿ ಎಂದರೆ ಬಿದರೆ ಅಂಥ ಜಿಲ್ಲೆಗಳಲ್ಲಿ ಕಾಡನ್ನು ಹೆಚ್ಚಾಗಿ ಬೆಳೆಸಲು ಪ್ರಯತ್ನ

(ಶ್ರೀ ಎಸ್. ಸುಬ್ಬಯ್ಯನಾಯಕ್)

ಮಾಡಬೇಕು. ಮಲೆನಾಡು ಭಾಗಗಳಲ್ಲಿ ಕಾಡು ಬೆಳೆದು ರೈತನ ಹೊಲಗಳಿಗೆ, ಗದ್ದೆಗಳಿಗೆ, ಅವರ ಆಸ್ತಿಪಾಸ್ತಿಗಳಿಗೆ ತುಂಬ ಅನಾನುಕೂಲವಾಗುತ್ತಿದೆ ಎಂದು ಬಲ್ಲವರು ಹೇಳುತ್ತಾರೆ. ಸರ್ಕಾರ ಇತ್ತಕಡೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಇವತ್ತು ಈ ಸಭೆಯಲ್ಲಿ ಚರ್ಚೆಗೆ ಇಟ್ಟುಕೊಂಡಿದ್ದಾರೆ. ಆದರೆ ಇದರ ರೂಪರೇಷೆ ಹೇಗಿರಬೇಕು ಎನ್ನುವ ವಿಚಾರವಲ್ಲಿ ಒಂದು ಸಾಹಿತ್ಯವನ್ನು ಸದಸ್ಯರಿಗೆ ಒದಗಿಸದೆ ಇರುವುದು ವಿಷಾದಕರವಾಗಿದೆ. ಇದುವರೆಗೂ ಮೂರು ಪಂಚವಾರ್ಷಿಕ ಯೋಜನೆಗಳನ್ನು ನೋಡಿದ್ದೇವೆ. ನಾಲ್ಕನೆಯ ಯೋಜನೆಯಲ್ಲಿ ಕೈಕೊಳ್ಳುವ ಪ್ರಯತ್ನಗಳೇನು, ಈ ಮೂರು ಯೋಜನೆಗಳಲ್ಲಿ ನಡೆದಂಥ ರೀತಿನೀತಿಗಳೇನು ಎಂದು ಸ್ವಲ್ಪ ನೋಡುವುದಾದರೆ ಇದರ ಪ್ರಚಾರ ಹಳ್ಳಿಗಾಡಿನ ಜನರಿಗೆ ಬಹಳ ಮಟ್ಟಿಗೆ ಆಗಿಲ್ಲ ಎಂದರೆ ತಪ್ಪಾಗಲಾರದು. ಈಗಾಗಲೇ ಈ ಮಾನ್ಯ ಸಭೆಯ ನನ್ನ ಸ್ನೇಹಿತರನೇಕರು ನೀರಾವರಿ ವಿಚಾರದಲ್ಲಿ ಬಹಳ ಮಟ್ಟಿಗೆ ಹೇಳಿದ್ದಾರೆ. ಆದುದರಿಂದ ಮತ್ತೆ ಅದನ್ನು ನಾನು ಹೇಳುವುದಕ್ಕೆ ಇಷ್ಟಪಡದೆ ನೀರಾವರಿ ಯೋಜನೆಗಳಲ್ಲದೆ ಬಹಳ ಪ್ರಾಮುಖ್ಯವಾದ ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಈ ಎರಡು ವಿಚಾರಗಳಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

10-30 A.M.

ಕೈಗಾರಿಕೆ ಮೈಸೂರು ರಾಜ್ಯದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮೈಸೂರುದೇಶ ಮಾದರಿ ದೇಶವಾಗಿತ್ತು. ಬಹಳ ಹಿಂದೆಯೇ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿಯೇ ಕೈಗಾರಿಕೀಕರಣ ಈ ದೇಶದಲ್ಲಿ ಆಗಬೇಕೆಂದು ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಈ ಯೋಜನೆಯ ಮೊದಲ ಕನಸು ಕಂಡರು. ಅವರು ಮತ್ತು ಅವರ ನಂತರ ಬಂದಂಥ ರಾಜರು ಮತ್ತು ಇಲ್ಲಿಯ ಪ್ರಧಾನ ಮಂತ್ರಿಗಳು ಬಹಳಮಟ್ಟಿಗೆ ಕೆಲಸ ಮಾಡಿ ಭದ್ರಾವತಿ ಕಬ್ಬಿಣದ ಕಾರ್ಖಾನೆ, ಸರ್ಕಾರಿ ಸಾಬೂನು ಕಾರ್ಖಾನೆ, ಎಲೆಕ್ಟ್ರಿಕಲ್ ಫ್ಯಾಕ್ಟರಿ, ಇಂಥ ಕೆಲವು ಬಹಳ ಅಮೂಲ್ಯವಾದ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು. ಈ ಕಾರ್ಯಗಳನ್ನು ಅವರು ಪ್ರಯತ್ನ ಮಾಡಿದರೂ ಕೂಡ ಸರ್ಕಾರವೇ ಇದರ ಮೇಲ್ವಿಚಾರಣೆಯನ್ನು ವಹಿಸಿಕೊಂಡರು ಕೂಡ ಎಷ್ಟು ಬಂಡವಾಳವನ್ನು ಅವರು ಹಾಕಿದ್ದರೂ ಕೂಡ ಅದಕ್ಕೆ ತಕ್ಕ ಪ್ರತಿಫಲ ಇದರಿಂದ ಬರುತ್ತಾ ಇಲ್ಲವೆಂದು ನಾನು ಹೇಳುತ್ತೇನೆ, ಏಕೆಂದರೆ, ಈ ಪ್ರೈವೇಟ್ ಸೆಕ್ಟರ್‌ನಲ್ಲಿ ಜನ ಬಂಡವಾಳಕ್ಕೆ ತಕ್ಕಂತೆ ಬಡ್ಡಿಯನ್ನು ಗಿಟ್ಟಿಸುವ ಜೊತೆಗೆ ಬಹಳವಾಗಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿದ್ದಾರೆ. ಆದರೆ ರಾಷ್ಟ್ರೀಕರಣ ಮಾಡತಕ್ಕ ಕೈಗಾರಿಕೆಗಳನ್ನು ನೋಡಿದರೆ ಬಹಳ ವಿಷಾದಪಡಬೇಕಾಗಿದೆ. ಸಿಬ್ಬಂದಿಯನ್ನು ಜಾಸ್ತಿ ಮಾಡಿ ಬರತಕ್ಕ ಉತ್ಪತ್ತಿಯನ್ನು ಸಿಬ್ಬಂದಿಯ ಸಂಬಳ ಸಾರಿಗೆ ಇವುಗಳಿಗೆ ಉಪಯೋಗಿಸುತ್ತಿದ್ದಾರೆಯೇ ವಿನ ಇವರು ಹಾಕತಕ್ಕ ಬಂಡವಾಳದಿಂದ ಅಷ್ಟಾಗಿ ಉತ್ಪತ್ತಿ ಸರಕಾರಕ್ಕೆ ಬರುತ್ತಾ ಇಲ್ಲ. ಅದರಿಂದಲೇ ಈ ದೇಶದಲ್ಲಿ ಕಾವೇರಿ ಮತ್ತು ಕೃಷ್ಣಾ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲಿ ಸಾಕಷ್ಟು ಹಣವಿಲ್ಲ. ಕೇಂದ್ರ ಸರ್ಕಾರದವರು ಕೊಡಬೇಕು, ಇಲ್ಲದಿದ್ದರೆ ಬಹಳ ಕಷ್ಟ. ನಿನ್ನೆ ಮೊನ್ನೆ ಮರಾಮತ್ ಶಾಖಾ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯನ್ನು ನೋಡಿದರೆ ಇವರಿಗೆ ಸ್ವತಃ ಯಾವ ಕೆಲಸವನ್ನೂ ಮಾಡುವುದಕ್ಕೂ ಆಗುವುದಿಲ್ಲ, ಇವರ ಸಹಾಯಕ್ಕೆ ಮತ್ತೊಬ್ಬರು ಬರುವುದು ಬಹಳ ಅಗತ್ಯವೆಂದು ಆ ಹೇಳಿಕೆಗಳಿಂದ ನನಗೆ ಗೊತ್ತಾಗುತ್ತದೆ. ಇವತ್ತು ಪ್ರೈವೇಟ್ ಸೆಕ್ಟರಿನಲ್ಲಿ ನಮಗೆ ಎಷ್ಟೋ ಕೈಗಾರಿಕೆ ಇಲಾಖೆಗಳು ಸ್ಥಾಪನೆಯಾಗಿದ್ದರೂ ಕೂಡ ಅಲ್ಲಿರುವವರಿಗೆ ನಿಜವಾಗಿ ಕೈಗಾರಿಕೆ ವಿಷಯ ಗೊತ್ತಿದೆಯೇ ಎಂಬ ಪರಿಸ್ಥಿತಿ ಬಂದಿದೆ. ಅಲ್ಲಿರತಕ್ಕ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಅವರಿಗೆ ಯಾವ ರೀತಿ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಕೈಗಾರಿಕಾಭಿವೃದ್ಧಿಯಾಗಿ ಸರಿಹೋಗುತ್ತದೆ, ಎಲ್ಲೆಲ್ಲಿ ಕೈಗಾರಿಕೆಗಳನ್ನು ತೆರೆಯಬೇಕು ಎಂಬ ವಿಚಾರವೇ ಗೊತ್ತಿಲ್ಲ. ಸುಮ್ಮನೆ ಅವರಿಗೆ ಪ್ರೋಮೋಷನ್‌ಗಳನ್ನು ದಾಕ್ಷಿಣ್ಯಕ್ಕೋಸ್ಕರ ಕೊಟ್ಟು ಬೇಕಾದಷ್ಟು ಅಂತಹ ಆಫೀಸುಗಳನ್ನು ಇವರು ತುಂಬಿಕೊಂಡಿದ್ದಾರೆ. ಇದರಿಂದಲೇ ಹಳ್ಳಿಗಾಡುಗಳಲ್ಲಿ ಏನೂ ಕೆಲಸಗಳಾಗುತ್ತಿಲ್ಲ. ಡೆವಲಪ್‌ಮೆಂಟ್ ಇಲಾಖೆಗಳಲ್ಲಿ, ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರುಗಳು, ಅಸಿಸ್ಟೆಂಟ್ ಡೈರೆಕ್ಟರ್‌ಗಳು ಪ್ರತಿಯೊಂದು ಜಿಲ್ಲೆಯಲ್ಲೂ ಇದ್ದಾರೆ. ಆದರೆ ಅವರ ಅಧಿಕಾರಾವಧಿಯಲ್ಲಿ ಅವರು ಜಿಲ್ಲೆಯಲ್ಲಾಗಲೀ ಅಥವಾ ತಾಲ್ಲೂಕ್‌ನಲ್ಲಾಗಲಿ ಎಷ್ಟು ಕಡೆ ಹೋಗಿದ್ದಾರೆ, ಏನೇನು ಕಚ್ಚಾಮಾಲುಗಳು ಎಲ್ಲೆಲ್ಲಿ ಸಿಗುತ್ತವೋ ಅವನ್ನು ಒಂದು ಕಡೆ ಕೂಡಿ ಹಾಕಿ ಇಂಥಿಂಥ ಕೈಗಾರಿಕೆಗಳನ್ನು ಸ್ಥಾಪನೆ

ಮಾಡುವುದಕ್ಕೆ ಇಂಥಿಂಥ ಅನುಕೂಲಗಳಿವೆ ಎಂಬುದಾಗಿ ಸರ್ಕಾರಕ್ಕೇನಾದರೂ ವರದಿ ಮಾಡಿದ್ದಾರೆಯೇ ಅಂದರೆ ಯಾರಾದರೂ ಆ ರೀತಿಯಲ್ಲಿ ವರದಿಗಳನ್ನು ಈಗಾಗಲೇ ಕಳುಹಿಸಿರುವರೇ ಎಂದು ಕೇಳಿದರೆ ಇಲ್ಲವೆಂದು ಹೇಳುವ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ. ಆದ್ದರಿಂದ ಇಂತಹ ಇಲಾಖೆಗಳು ಏತಕ್ಕೆ ಇರಬೇಕು ? ಈ ವರ್ಷ ಮಳೆ ಬೆಳೆಯಂತೂ ಆಗಲಿಲ್ಲ. ರೇವತಿ ಮಳೆ ಬೀಳಲೇ ಇಲ್ಲ. ಇದೇ ರೀತಿ ನಡೆದರೆ ಮುಂದಿನ ವರ್ಷವೂ ಕೂಡ ಮಳೆ ಕೈ ಕೊಡುತ್ತದೆ. ಅದರಿಂದ ಬಹಳ ತೊಂದರೆಯಾಗುತ್ತದೆಂದು ನನಗೆ ಭಾಸವಾಗುತ್ತದೆ. ಹಿಂದೆ ಒಬ್ಬ ದೊಡ್ಡ ತತ್ವಜ್ಞಾನಿ ಒಂದು ಮಾತನ್ನು ಹೇಳಿದ್ದರು. 30-10 ವರ್ಷಗಳಿಗೊಂದು ಸಾರಿ ಒಂದು ವರ್ಷ ಮಳೆಯಾಗದೆ ಹಾಗೆಯೇ ಇದ್ದರೆ ಬರುವ ವರ್ಷವೂ ಹಾಗೆಯೇ ಇರುತ್ತದೆಂದು. ಹೋದ ಸಾರಿ ಮಳೆ ಪೂರ್ತಿಯಾಗಿ ಹೋಯಿತು. ಈ ಸಾರಿಯೂ ಮಳೆ ಹೋಗತಕ್ಕ ಸೂಚನೆ ಕಾಣುತ್ತಾ ಇರುವುದರಿಂದ ಈಗ ರೈತರು ವ್ಯವಸಾಯವನ್ನೇ ನಂಬಿ ಕುಳಿತುಕೊಳ್ಳುವುದಕ್ಕೆ ಬದಲಾಗಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಂದು ಹಳ್ಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸರ್ಕಾರದವರು ಸಣ್ಣಪುಟ್ಟ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಅಲ್ಲಿನ ಜನರಿಗೆಲ್ಲರಿಗೂ ಜೀವನವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಅಲ್ಲಿನ ಜನರು ಬಹಳ ತೊಂದರೆ ಪಡಬೇಕಾದ ಪರಿಸ್ಥಿತಿ ಬರುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಹೆಂಚಿನ ಕಾರ್ಖಾನೆಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಕಲ್ನಾರು ಹೊಳೇನರಸೀಪುರದಲ್ಲಿ ವಿಶೇಷವಾಗಿ ದೊರೆಯುವುದರಿಂದ ಅಲ್ಲಿ ಒಂದು ಕಾರ್ಖಾನೆಯನ್ನು ತೆರೆದಿದ್ದಾರೆ ಸುಮಾರು 100 ಜನರವರೆಗೆ ಕೆಲಸ ಸಿಗತಕ್ಕ ಕಸುಬುಗಳನ್ನು ಬೇಕಾದಷ್ಟು ಮಾಡಬಹುದು. ತಿಪಟೂರು ವಗೈರೆ ಪ್ರಾಂತಗಳಲ್ಲಿ ಚಿಪ್ಪಿನಿಂದ ಮಾಡತಕ್ಕ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ ಇದನ್ನೆಲ್ಲಾ ಯೋಚಿಸಿ ನಾವೂ ಸರ್ಕಾರದವರೂ ಜೊತೆಗೂಡಿ ಎಲ್ಲವನ್ನೂ ರಾಷ್ಟ್ರೀಕರಣ ಮಾಡೋಣವೆಂದರೆ ಸರ್ಕಾರದಲ್ಲಿ ಸಾಕಷ್ಟು ಬಂಡವಾಳವಿಲ್ಲ. ಈ ಬಗ್ಗೆ ಸಾರ್ವಜನಕರಿಗೆ ಬೇಕಾದಷ್ಟು ಹುಮ್ಮಸ್ಸು, ಪ್ರೋತ್ಸಾಹ ಕೊಟ್ಟು ಅವರು ಹೆಚ್ಚು ಹೆಚ್ಚಿಗೆ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಿ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಲೇಬರರ್ಸ್ ಮತ್ತು ಮ್ಯಾನೇಜ್‌ಮೆಂಟಿನವರು–ಇವರಿಬ್ಬರ ಸಂಬಂಧ ಸರಿಯಾಗಿಲ್ಲದೆ ಅನೇಕ ಸಾರಿ ಮುಷ್ಕರಗಳು ನಡೆದು ಅಲ್ಲಿ ಆಗತಕ್ಕ ಉತ್ಪತ್ತಿ ಸರಿಯಾಗಿ ಆಗುತ್ತಾ ಇಲ್ಲ ನನ್ನ ಸಲಹೆ ಈ ಬಗ್ಗೆ ಏನೆಂದರೆ ಕಾರ್ಮಿಕರು ಮತ್ತು ಬಂಡವಾಳಗಾರರು ಉತ್ಪತ್ತಿಗೆ ತಕ್ಕಂತೆ ಲೇಬರರ್ಸಿಗೆ ಸರಿಯಾದ ಕೂಲಿ ವಗೈರೆ ನಿಷ್ಕರ್ಷೆ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಬಂಡವಾಳಕ್ಕೆ ತಕ್ಕ ಬಡ್ಡಿ, ಅದಕ್ಕೆ ಖರ್ಚು, ಇದನ್ನು ತೆಗೆದರೆ ಈ ಸಂಸ್ಥಾನದಲ್ಲಿ ಉಳಿಯತಕ್ಕ ಹಣವನ್ನು ಕೈಗಾರಿಕೆಗೆ ಹಾಕುವುದರಿಂದ ಬಡವರ ಮೇಲೆ ಹೆಚ್ಚು ಹೆಚ್ಚು ತೆರಿಗೆ ಹಾಕುವುದಕ್ಕೆ ಬದಲಾಗಿ ಕೈಗಾರಿಕೆಗಳಿಂದ ಹೆಚ್ಚು ವರಮಾನ ಪಡೆಯಬಹುದು. ಈಗ ಅದನ್ನು ಒಂದು ಪರ್ಸಂಟೇಜ್‌ವರೆಗೆ ಮಾಡಿಕೊಂಡು ಬಾಕಿ ಉಳಿಕೆಯನ್ನು ಹೆಚ್ಚು ಕೂಲಿ ವಗೈರೆಗಾಗಿ ಕೂಲಿಗಾರರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಲೇಬರರ್ಸ್ ಮತ್ತು ಮ್ಯಾನೇಜ್‌ಮೆಂಟಿನವರು ಹೀಗೆ ಇವರಿಬ್ಬರೂ ಸೇರಿರುವಂತೆ ಒಂದು ಆಡಳಿತ ಮಂಡಲಿಯನ್ನು ಮಾಡಬೇಕೆಂದು ಹೇಳುತ್ತೇನೆ.

ಮತ್ತೆ ಇವೆಲ್ಲಕ್ಕಿಂತ ಮುಖ್ಯವಾಗಿ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು. ವಿದ್ಯಾಭ್ಯಾಸ ಬಹಳ ಮುಖ್ಯವಾದ ವಿಚಾರ. ಇವತ್ತು ವಿದ್ಯಾಭ್ಯಾಸದ ರೀತಿನೀತಿಗಳು ಹಿಂದೆ ಇದ್ದಂತಿಲ್ಲ. ದಿನದಿನಕ್ಕೂ ಮಾರ್ಪಾಟು ಆಗುತ್ತಲೇ ಇದೆ. ಇವತ್ತು ಕರಿಕ್ಯುಲಂ ಮಾಡಿಕೊಳ್ಳತಕ್ಕದ್ದು, ಪಾಠಪ್ರವಚನಗಳನ್ನು ಮಾಡುವ ರೀತಿ. ಇವನ್ನು ನಾವು ನೋಡಿದರೆ ನಾವು ಎಲ್ಲಿಗೆ ಹೋಗುತ್ತೇವೋ ಎಂಬುದಾಗಿ ಅನುಮಾನವಾಗುತ್ತದೆ. ಇನ್ನು ಮಕ್ಕಳು ಬಾಯಿಪಾಠ ಮಾಡಬಾರದು ಎಂದು ಹೇಳುತ್ತಾರೆ. ಇದರಿಂದ ಮಕ್ಕಳಿಗೆ ಪಾಠಗಳು ಕ್ರಮೇಣ ಸರಿಯಾಗಿ ಬರುವುದಿಲ್ಲ. ಇವರು ಕೊಡತಕ್ಕ ವಿದ್ಯಾಭ್ಯಾಸ ಕ್ರಮವೇ ಸರಿಯಾಗಿಲ್ಲ. ನಮ್ಮ ಸಂಸ್ಕೃತಿಗೆ ಅಳವಡಿಸಿಕೊಂಡು ವಿದ್ಯಾಭ್ಯಾಸವನ್ನು ಕೊಡದೇಹೋದರೆ ವಿದ್ಯಾಭ್ಯಾಸದಲ್ಲಿ ನಮಗೆ ಒಳ್ಳೆಯದಾಗುವುದಿಲ್ಲ. ನಾಳೆ ಈ ದೇಶದ ಆಗುಹೋಗುಗಳ ಹೊರೆಯನ್ನು ಹೊರತಕ್ಕಂಥ ಮಕ್ಕಳು ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಪಡೆಯದೆ ಹೋದರೆ ಈ ದೇಶ ವಿನಾಶಕ್ಕೆ ಗುರಿಯಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

[MR. SPEAKER in the Chair]

ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ. ಅಗಿರುವವರು, ಗ್ರಾಜುಯೇಟ್ಸ್ ಆಗಿರುವವರು ಒಂದೆರಡು ವಾಕ್ಯಗಳನ್ನು ಸರಿಯಾದ ರೀತಿಯಲ್ಲಿ ವ್ಯಾಕರಣಬದ್ಧವಾಗಿ ಬರೆಯುವುದಕ್ಕೆ ಬಾರದೇ ಇದ್ದರೂ ಅಂತಹವರನ್ನು ಈಗ ಸೆಲೆಕ್ಟ್ ಮಾಡಿದ್ದಾರೆ. ನಾನು ಒಂದೆರಡು ಕಡೆ ಹೋಗಿ ನೋಡಿ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ದ್ದೇನೆ. ಒಂದುಕಡೆ ನಾನೇ ಇದ್ದು ಅಲ್ಲಿನ ಉಪಾಧ್ಯಾಯರಿಗೆ ಒಂದು ಪದವನ್ನು ಸೇರಿಸುವಾಗ ಬ್ಲ್ಯಾಕ್‌ಬೋರ್ಡ್‌ನಲ್ಲಿ ಬರೆಯಿರಿ ಎಂದು ಹೇಳಿದೆ. ಇವತ್ತು ಟ್ರೈನಿಂಗ್‌ನಲ್ಲಿ ಪಾಸ್‌ಮಾಡಿಕೊಂಡು ಬಂದವರೂ ಇಂಥಹ ಟ್ರೈನಿಂಗ್ ಆಗಿರುವವರು ಶಾಲಾ ಮುಖ್ಯೋಪಾಧ್ಯಾಯರಾದರೆ ಅಂತಹವರಿಂದ ನಮ್ಮ ಮಕ್ಕಳಿಗೆ ಸಿಕ್ಕುವ ವಿದ್ಯಾಭ್ಯಾಸ ಯಾವ ಮಟ್ಟದ್ದು ಆಗಿರುತ್ತೆ ಎಂಬುದನ್ನು ಮಾನ್ಯ ಸದಸ್ಯರು ಯೋಚಿಸಬೇಕಾಗಿದೆ. ಈಗ ಹೆಚ್ಚು ಹೆಚ್ಚು ಪ್ರಾಥಮಿಕ ಶಾಲೆಗಳನ್ನು ತೆರೆಯುತ್ತಿದ್ದಾರೆ. ಒಬ್ಬ ಉಪಾಧ್ಯಾಯನಿಗೆ ಸುಮಾರು 50-60 ಮಕ್ಕಳ ಮೇಲ್ವಿಚಾರಣೆಯನ್ನು ಕೊಡಬೇಕು. ಅವರಿಗೆ ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ನಾವು ಈಗಿನಿಂದಲೇ ಮನಸ್ಸು ಮಾಡಬೇಕು. ಒಳ್ಳೆಯ ತರಪೇತು ಆದವರನ್ನು ಯಾವ ದಾಕ್ಷಿಣ್ಯವಿಲ್ಲದೆ ಇಂತಹ ಕೆಲಸಗಳಿಗೆ ನೇಮಿಸಬೇಕು. ಏಕೆಂದರೆ, ಎಲ್ಲಾ ಬಾಬುಗಳಿಗಿಂತಲೂ ಈಗ ವಿದ್ಯಾಭ್ಯಾಸ ಬಾಬಿನಲ್ಲಿ ಜಾತೀಯತೆ ಹಾಗೂ ಪ್ರಾಂತೀಯತೆ ಎನ್ನುವ ವಿಚಾರ ಬರಕೂಡದು. ಆ ಒಂದು ಭಾವನೆ ಅವರಿಗೆ ಬಾರದೇ ಇದ್ದರೆ ಅದರಿಂದ ಮಕ್ಕಳಿಗೆ ಪ್ರಯೋಜನ ಜಾಸ್ತಿಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮಗೆ ಗೊಬ್ಬರ ಸರಿಯಾಗಿ ಸಿಕ್ಕುತ್ತಿಲ್ಲ. ಹಳ್ಳಿಗಾಡುಗಳಲ್ಲಿ ಗೋಮಾಳಗಳು ಸಾಕಷ್ಟು ಇಲ್ಲ. ನಮ್ಮಲ್ಲಿ ಹಿಂದೆ ಇದ್ದಹಾಗೆ ದನ ಕುರಿಗಳನ್ನು ಸಾಕುವುದಕ್ಕೆ ಸಾಕಷ್ಟು ಸರಿಯಾದಂತಹ ಪ್ರೋತ್ಸಾಹ ಸಿಕ್ಕುತ್ತಿಲ್ಲ. ದನಕರುಗಳಿನ್ನು ಮೇಯಿಸುವುದಕ್ಕೆ ಹುಲ್ಲುಗಾವಲುಗಳು ಇಲ್ಲ. ಆದ್ದರಿಂದ ಹೆಚ್ಚುಹೆಚ್ಚಾಗಿ ಗೋಸಂಪತ್ತನ್ನು ಮತ್ತು ಕುರಿಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಆದ್ಯ ಗಮನಕೊಟ್ಟು ಅದಕ್ಕೆ ಬೇಕಾದ ಸೌಕರ್ಯವನ್ನು ರೈತರಿಗೆ ಒದಗಿಸಿಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೈತರು ಬರೀ ವ್ಯವಸಾಯವನ್ನೇ ನಂಬಿಕೊಂಡು ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾಲ್ಕಾರು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅದರಲ್ಲಿ ಸಾವಿರಾರು ಗಟ್ಟಲೆ ಜನರು ಕೆಲಸಗಳನ್ನು ಪಡೆಯುವುದಕ್ಕೆ ಅನುಕೂಲವಾಗುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರ ಸಹಾಯ ಸಿಕ್ಕಲಿ ಅಥವಾ ಸಿಕ್ಕದೇ ಇರಲಿ ರಾಜ್ಯಸರ್ಕಾರದವರೇ ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕು. ಹೊಸಪೇಟೆ ಮುಂತಾದ ಸ್ಥಳಗಳಲ್ಲಿ ಇಂಥಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಮಗೆ ವ್ಯವಸಾಯಕ್ಕೆ ಬೇಕಾದಂತಹ ಉಪಕರಗಳನ್ನು ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಅದರ ಅಗತ್ಯತೆ ಕೂಡ ನಮಗೆ ಇದೆ. ಈಗ ನಾವು ವ್ಯವಸಾಯದ ಹಾಗೂ ಇತರ ಉಪಕರಣಗಳಿಗೆ ಪರದೇಶದವರನ್ನೇ ಅವಲಂಬಿಸಿಕೊಂಡಿದ್ದೇವೆ. ಆ ಪರಾವಲಂಬನೆಯನ್ನು ತಪ್ಪಿಸುವುದಕ್ಕಾಗಿ ಸಣ್ಣ ಸಣ್ಣ ಮತ್ತು ಮಧ್ಯಮ ಪ್ರಮಾಣದ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಬೆಂಗಳೂರು ಒಂದೇ ಪಟ್ಟಣದ ಸುತ್ತಮುತ್ತಲೂ ಹಾಕುವುದಕ್ಕೆ ಬದಲಾಗಿ ಎಲ್ಲೆಲ್ಲಿ ರೈಲ್ವೆ ಸೌಕರ್ಯ ಇದೆಯೋ ಅಂಥಾ ಮುಖ್ಯ ಪಟ್ಟಣಗಳ ಸಮೀಪದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಮ್ಮ ದೇಶಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇದರಲ್ಲಿ ಸರ್ಕಾರದವರು ಹಾಕಿರತಕ್ಕ ರೀತಿನೀತಿಗಳು ಏನಿವೆ ಅವು ಸಮಾಧಾನಕರವಾಗಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ನಮ್ಮ ದೇಶಕ್ಕೆ ಅನುಕೂಲವಾಗತಕ್ಕಂಥ ಸ್ಥಿತಿಗತಿಗಳನ್ನು ಸರ್ಕಾರದವರು ಆಳವಾಗಿ ಯೋಚನೆ ಮಾಡುತ್ತಾರೆಂದು ನಾವು ನಂಬಿದ್ದೇವೆ. ದೇಶದ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಸರ್ಕಾರದವರು ಒಂದು ಸರಿಯಾದ ಸನ್ಮಾರ್ಗದಲ್ಲಿ ಹೋದರೆ ಅದಕ್ಕೆ ನಮ್ಮೆಲ್ಲರ ಬೆಂಬಲವೂ ಇದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಧ್ಯಕ್ಷರು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ವಿ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳನ್ನು ಪೂರೈಸಿದ್ದೇವೆ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ವಿಮರ್ಶೆ ಮಾಡಿ ತಂದು ಅದನ್ನು ಜಯಪ್ರದವಾಗಿ ಕಾರ್ಯಗತ ಮಾಡಲು ಈಗ ಚರ್ಚೆ ಮಾಡುತ್ತಿದ್ದೇವೆ. ಹಿಂದಿನ ಮೂರು ಯೋಜನೆಗಳಲ್ಲಿ ಕಂಡುಬಂದಂತಹ ಲೋಪದೋಷಗಳನ್ನು ಸರಿಪಡಿಸಿಕೊಂಡು ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಜಯಪ್ರದವಾಗಿ ನಡೆಸಿ ಅದರ ಫಲವನ್ನು ದೇಶದ ಎಲ್ಲಾ ಜನತೆಗೂ ಕೂಡ ದೊರೆಯುವಂತೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಮೂರು ಯೋಜನೆಗಳಲ್ಲಿ ನಾವು ನಿರೀಕ್ಷಿದಷ್ಟು ಜಯವನ್ನು ಗಳಿಸಿದ್ದೇವೆಯೇ

ಎನ್ನುವುದಾದರೆ, ಅದರಿಂದ ಬಹಳಮಟ್ಟಿಗೆ ಫಲ ದೊರೆತಿದೆ ಎಂದು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ದೇಶದ ವರಮಾನ, ನ್ಯಾಷನಲ್ ಇನ್‌ಕಂ ನಾವು ನಿರೀಕ್ಷಿಸಿದಷ್ಟು ಏರದೇ ಇದ್ದರೂ ಕೂಡ ಸ್ವಲ್ಪಮಟ್ಟಿಗಾದರೂ ಜನಗಳ ಆದಾಯ, ಸಂಪಾದನೆ ಮಾಡತಕ್ಕ ಶಕ್ತಿ ಹೆಚ್ಚಾಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದರಲ್ಲಿ ನ್ಯಾಷನಲ್ ಇನ್‌ಕಂ ಹೆಚ್ಚಾಗಿದೆ ಎಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದಾಯ ಎನ್ನತಕ್ಕಂಥಾದ್ದು ಸರಿಯಾದ ರೀತಿಯಲ್ಲಿ, equitable basis ಮೇಲೆ ಎಲ್ಲರಿಗೂ ಕೂಡ ಕಾಣುವ ರೀತಿಯಲ್ಲಿ ಎಲ್ಲಾ ಜನರಲ್ಲಿಯೂ ಕೂಡ ಹಂಚಿಕೆಯಾಗಿಲ್ಲ. ಇದಕ್ಕೆ ಕಾರಣ ಅನೇಕ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ಹಿಂದೆ ಬಡತನ ಏನಿತ್ತು, ಹಿಂದೆ ಅವರಿಗೆ ಕಷ್ಟಕಾರ್ಪಣ್ಯಗಳು ಏನಿದ್ದವು ಅವೆಲ್ಲವೂ ಮುಂದುವರಿಯುತ್ತಿವೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಹಿಂದೆ ಯಾವ ಒಂದು ವರ್ಗದ ಜನ ಸಂಪಾದನಾ ಶಕ್ತಿಯನ್ನು ಪಡೆದಿದ್ದರೋ, ಯಾರು ಮೂಲಧನವನ್ನು ಇಟ್ಟುಕೊಂಡಿದ್ದರೋ ಅಂಥವರಿಗೆ ಈ ಯೋಜನೆಗಳ ಫಲ ದೊರೆತಿದೆ. ಅವರು ಹೆಚ್ಚಿನ ಉತ್ಪತ್ತಿಯನ್ನು ಮಾಡಿದ್ದಾರೆ. ಅದಕ್ಕೆ ಕಾರಣ ಸರ್ಕಾರದವರು ಯೋಜನೆಗಳಲ್ಲಿ ಜನಗಳಿಗೆ ಏನೇನು ಸೌಲಭ್ಯಗಳನ್ನು ಕೊಟ್ಟರೋ ಅದೆಲ್ಲವೂ ಕೂಡ ಬಡವರಿಗೆ ನೇರವಾಗಿ ದೊರೆಯತಕ್ಕ ಸನ್ನಿವೇಶ ಇರಲಿಲ್ಲ. ಸರಕಾರದಿಂದ ಹಣದ ಒಂದು ಸಹಾಯ ದೊರೆಯಬೇಕಾಗಲೀ ಅಥವಾ ಇನ್ನು ಯಾವುದಾದರೂ ಒಂದು ಸಹಾಯ ದೊರೆಯಬೇಕಾದರೂ ಕೂಡ ಯಾರಿಗೆ ಸರಿಯಾಗಿ ಆಸ್ತಿಪಾಸ್ತಿಗಳು ಇವೆಯೋ ಯಾರಿಗೆ ಸೆಕ್ಯೂರಿಟಿಗಳು ಇವೆಯೋ ಅಂಥವರಿಗೆ ಸಹಾಯ ಸೌಲಭ್ಯಗಳು ದೊರೆತು ಅವರು ಇನ್ನೂ ಹೆಚ್ಚಿನ ಸಂಪಾದನೆ ಮಾಡುವುದಕ್ಕೆ, ಹೆಚ್ಚಿನ ಅನುಕೂಲತೆಯನ್ನು ಪಡೆಯುವುದಕ್ಕೆ ಹಿಂದಿನ ಯೋಜನೆಗಳು ಸಹಕಾರಿಯಾಗಿದ್ದು ಶ್ರೀಮಂತರು ಇನ್ನೂ ಹೆಚ್ಚಿನ ಶ್ರೀಮಂತರಾಗಿದ್ದಾರೆ. ಸಮಾಜದಲ್ಲಿ ಕೆಲವು ವರ್ಗದ ಜನರು, ಕಂಟ್ರಾಕ್ಟರುಗಳು ಹೆಚ್ಚಿನ ಐಶ್ವರ್ಯವನ್ನು ಗಳಿಸಿತತಕ್ಕಂಥಾದ್ದು ಅನೇಕರ ಗಮನಕ್ಕೆ ಬಂದಿದೆ. ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವರ್ಷೇ ವರ್ಷೇ ಸಿನಿಮಾ ಮಂದಿರಗಳು ಬೆಳೆಯುತ್ತಿವೆ ಮತ್ತು ದೊಡ್ಡ ದೊಡ್ಡ ಹೋಟಲುಗಳು ಬೆಳೆಯುತ್ತಿವೆ. ಜನ ಸಂದಣಿಯು ಜಾಸ್ತಿಯಾಗುತ್ತಿದೆ. ಆದ್ದರಿಂದ ಮುಂದಿನ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಕೂಡ ಹಿಂದಿನ ಯೋಜನೆಯಲ್ಲಾದ ತಪ್ಪನ್ನು ಸರ್ಕಾರದವರು ಸರಿಪಡಿಸಿಕೊಂಡು ದೇಶದ ಐಶ್ವರ್ಯವನ್ನು ಎಲ್ಲರಿಗೂ ಸಮನಾದ ರೀತಿಯಲ್ಲಿ ಹಂಚಿಕೆಯಾಗುವ ರೀತಿಯಲ್ಲಿ ಮಾಡಲು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಸಫಲವಾಗಬೇಕಾದರೆ ಈಗಾಗಲೇ ನಮ್ಮ ಅನೇಕ ಸ್ನೇಹಿತರು ಹೇಳಿದ ಹಾಗೆ ಸಾಕಷ್ಟು ಹಣ ಬೇಕು, ಆ ಹಣವನ್ನು ದೊರಕಿಸಿಕೊಳ್ಳಬೇಕಾದರೆ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆದುಕೊಳ್ಳಬೇಕು. ಮತ್ತು ನಮ್ಮ ರಾಜ್ಯದಲ್ಲೂ ಕೂಡ ಯಾರಿಗೆ ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇದೆ, ಯಾರು ಸರ್ಕಾರದ ಸಹಾಯವನ್ನು ಪಡೆದು ಲಾಭವನ್ನು ಪಡೆಯುತ್ತಿದ್ದಾರೆ, ಅಂಥಾ ವರ್ಗದ ಜನಗಳಿಂದ ಹೆಚ್ಚಿನ ತೆರಿಗೆಯನ್ನು ವಸೂಲು ಮಾಡಿ ಹಣವನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಅದೇ ರೀತಿ ಸರ್ಕಾರದವರು ಉಳಿತಾಯವನ್ನು ಕೂಡ ಕಟ್ಟುನಿಟ್ಟಾಗಿ ಮಾಡಬೇಕು. ಈ ರೀತಿ ಮಾಡಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಸಫಲಗೊಳಿಸುವುದಕ್ಕೆ ಅನೇಕ ಮಾರ್ಗಗಳಿವೆ, ಎಂದು ನಾನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಈ ಯೋಜನೆಯು ಸಫಲವಾಗಬೇಕಾದರೆ ಯೋಜನೆಯ ಮಹತ್ವದ ಅರಿವು ಜನಗಳಲ್ಲಿ ಉಂಟಾಗಬೇಕಾದರೆ, ಜನಗಳಲ್ಲಿ ಜಾಗೃತಿಯನ್ನುಂಟು ಮಾಡಬೇಕಾದರೆ ಯೋಜನೆಗಳ ಕೆಲಸ ಎಲ್ಲಾ ಕಡೆಗಳಲ್ಲೂ ಕೂಡ ಸಮಾನವಾದ ರೀತಿಯಲ್ಲಿ ನಡೆಯಬೇಕು. ಕೆಲವು ಕಡೆಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಯೋಜನೆಯ ಕೆಲಸಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎನ್ನುವ ಅರಿವು ಜನಗಳಿಗೆ ಉಂಟಾಗಿಲ್ಲ. ಇದನ್ನು ಒಂದು ನ್ಯಾಯವಾದ ರೀತಿಯಲ್ಲಿ ನಾವು ಮಾಡಬೇಕಾಗಿದೆ. ಮೈನರ್ ಇರಿಗೇಷನ್ನಿಂದ ಹೆಚ್ಚಿನ ಫಲ ಪಡೆಯಬೇಕಾಗಿದೆ. ಶ್ರೀಮಾನ್ ದೇವೇಗೌಡರು ಮೈನರ್ ಇರಿಗೇಷನ್ನು ಕೆಲಸಗಳಿಂದ ಅಷ್ಟು ಪ್ರಯೋಜನ ಹೆಚ್ಚು ಬರಲಾರದು, ಇದಕ್ಕಾಗಿ ಮೇಜರು ಇರಿಗೇಷನ್ ಬಾಬಿಗಾಗಿ ಹೆಚ್ಚು ಖರ್ಚು ಮಾಡುವುದರಿಂದ ನಮಗೆ ಈಗ ಇರುವ ಆಹಾರ ಅಭಾವವನ್ನು ನೀಗಲು ಅವಕಾಶವಾಗುತ್ತದೆ ಎಂದು ಹೇಳಿದರು. ಅದೇನೋ ಸರಿ. ಆದರೆ ಈಗಿರುವ ಆಹಾರದ ಅಭಾವವನ್ನು ನೀಗಬೇಕಾದರೆ ಮುಂದೆ ಬರತಕ್ಕ ಇನ್ನೊಂದರೆಡು ವರ್ಷಗಳಲ್ಲಿ ಮೈನರು ಇರಿಗೇಷನ್ನು ಕೆಲಸಗಳ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕಾದುದು ಹೆಚ್ಚಿನ ಆದ್ಯತೆ ಕೊಡಬೇಕಾದುದು ಸರ್ಕಾರದ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಯೋಜನೆಗಳಲ್ಲಿರುವಂತೆ ಏನಾಗುತ್ತಿದೆ ಎಂದರೆ, ಹೆಚ್ಚಿನ ರಿಟರ್ನ್ ಬರುವ ರೀತಿಯಲ್ಲಿ ಕಟ್ಟೆಗಳನ್ನು ಕಟ್ಟಿಲ್ಲ. ಅಲ್ಲದೆ ಕಟ್ಟಿರುವ ಕಟ್ಟೆಗಳಿಂದ ಬಂದಿರುವ ರಿಟರ್ನ್ ಸುಮಾರು ಶೇಕಡ ಅರ್ಧ ಅಥವಾ ಒಂದರಷ್ಟು ಇದೆ. ಹೊಸ ಕೆಲವು ಕಡೆ ಸ್ವಲ್ಪ ಹೆಚ್ಚಾಗಿ ಬರಬಹುದು. ಮಲೆನಾಡು ಭಾಗಗಳಾದ ಶಿವಮೊಗ್ಗಾ ಮತ್ತು ಹಾಸನದ ಕೆಲವು ಭಾಗಗಳಲ್ಲಿ ಮೈನರು ಇರಿಗೇಷನ್ನು ಕೆಲಸಗಳು ಬಹಳ ಇವೆ. ಇಲ್ಲಿ ಹೊಸ ಕೆಲಸ

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಗಳನ್ನು ಪಿಕ್ ಅಪ್‌ಗಳನ್ನು ಮಾಡಿ ಲಿಫ್ಟ್ ಇರಿಗೇಷನ್ನು ಕೆಲಸಗಳನ್ನು ತೆಗೆದುಕೊಂಡು ಅತಿ ಕಡಿಮೆ ದುಡ್ಡಿನಲ್ಲಿ ಹೆಚ್ಚು ಪ್ರಯೋಜನ ದೊರೆಯುವಂತಹ ಅವಕಾಶಗಳು ಇವೆ. ಇದನ್ನು ಸಮಗ್ರವಾದ ರೀತಿಯಲ್ಲಿ ಒಂದು ಯೋಜನೆ ಮಾಡಿ ಯಾವ ಯಾವ ಕಾರ್ಯಗಳಿಗೆ ಮೊದಲನೆ ಪ್ರಯಾರಿಟಿ ಕೊಡಬೇಕು ಎಲ್ಲಿ ಮೈನರು ಇರಿಗೇಷನ್ನು ಕೆಲಸಗಳಿಗಾಗಿ ಖರ್ಚು ಮಾಡಬೇಕು ಎನ್ನುವುದನ್ನು ಸರಿಯಾಗಿ ಯೋಜನೆ ಮಾಡಿ ಆ ಯೋಜನೆಯನ್ನು ಅನುಸರಿಸಿಕೊಂಡು ಕೆಲಸ ಮಾಡಬೇಕಾಗಿದೆ. ಇದರಲ್ಲಿ ರಾಜಕೀಯ ಪ್ರಭಾವಗಳಿಗಾಗಲಿ ಬೇರೆ ಯಾವ ಒತ್ತಡಗಳಿಗಾಗಲಿ ಅವಕಾಶ ಕೊಡದೇ ಒಂದೆರಡು ವರ್ಷಗಳಲ್ಲೇ ಹೆಚ್ಚು ಆಹಾರದ ಅಭಾವವನ್ನು ನೀಗಲು ಅನುಕೂಲವಾಗುವಂತೆ ಬೆಳೆಯನ್ನು ಉತ್ಪಾದನೆ ಮಾಡಲು ನಮ್ಮ ಮಲೆನಾಡಿನ ಭಾಗದಲ್ಲಿ ಅವಕಾಶಗಳಿವೆ. ಉತ್ಪಾದನೆ ಹೆಚ್ಚಾದರೆ ವ್ಯಾಪಾರವೂ ಹೆಚ್ಚಾಗುತ್ತದೆ, ಹೆಚ್ಚು ರಿಟರ್ನ್ ಬರುತ್ತದೆ. ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಾನು ಇಲ್ಲಿ ಕೇಳುತ್ತೇನೆ. ಈ ಸಂದರ್ಭದಲ್ಲಿ ಕಾವೇರಿ ನದಿ ಹರಿಯತಕ್ಕ ಪ್ರದೇಶಗಳಲ್ಲಿ ಹೇಮಾವತಿ ಹಾಗೂ ಎಗಚಿ ನದಿಗಳು ಹರಿಯುವ ಪ್ರದೇಶಗಳಲ್ಲಿ ಲಿಫ್ಟ್ ಇರಿಗೇಷನ್ನು ಕೆಲಸಗಳನ್ನು ಮಾಡಲು ಹೆಚ್ಚಿನ ಅವಕಾಶಗಳು ಇವೆ. ಹಾಸನದಲ್ಲೂ ಇಂತಹ ಅಭಿವೃದ್ಧಿಯಾಗಬೇಕಾದ ಕೆರೆಗಳೂ ಬರುತ್ತವೆ. ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಇಲ್ಲಿ ಖರ್ಚು ಮಾಡಿದರೆ ಇಲ್ಲಿ ಲಿಫ್ಟ್ ಇರಿಗೇಷನ್ನಿನ ಸ್ಕೀಮುಗಳನ್ನು ಮಾಡಬಹುದು ಮತ್ತು ಈ ಯೋಜನೆಯಿಂದ ಸುಮಾರು 300 ಸಾವಿರ ಎಕರೆಗಳಷ್ಟು ಪ್ರದೇಶ ನೀರಾವರಿಗೆ ಬರಲು ಅನುಕೂಲವಾಗುತ್ತದೆ. ಇದನ್ನು ಕೇವಲ ಸ್ವಲ್ಪ ಕಾಲದಲ್ಲಿಯೇ ಎಂದರೆ ನಾಲ್ಕೈದು ತಿಂಗಳಲ್ಲೇ ಪೂರೈಸಬಹುದು ಮತ್ತು ಇಲ್ಲಿ ಎರಡು ಬೆಳೆಯನ್ನು ತೆಗೆಯಲೂ ಅವಕಾಶವಿದೆ. ನಮ್ಮ ಹಾಸನ ಜಿಲ್ಲೆಯಲ್ಲಿರುವ ಹೇಮಾವತಿ, ಕಾವೇರಿ ಹಾಗೂ ಎಗಚಿ ನದಿಗಳ ಆಶ್ರಯದಲ್ಲಿ ಮಾಡಬೇಕಾದಂತಹ ಸುಮಾರು 70-75 ಯೋಜನೆಗಳು ಬಹಳ ಚಿಕ್ಕದಾಗಿರುವುದು ಇವೆ, ಇವನ್ನು ಒಂದೆರಡು ವರ್ಷಗಳಲ್ಲೇ ತೆಗೆದುಕೊಂಡು ಪೂರೈಸಬಹುದು ಮತ್ತು ಹಾಗೆ ಪೂರ್ತಿ ಮಾಡಿದರೆ ಅದರಿಂದ ಎರಡು ಬೆಳೆಗಳನ್ನು ಪಡೆದು ಉಪಯೋಗಮಾಡಿಕೊಳ್ಳಬಹುದು ಮತ್ತು ಇಲ್ಲಿ ಎಲೆಕ್ಟ್ರಿಸಿಟಿ ಸಿದ್ಧವಾಗಿಯೇ ಇದೆ. ಇಷ್ಟೆಲ್ಲಾ ಅನುಕೂಲಗಳಿದ್ದರೂ ಕೂಡ ಇದರ ಬಗ್ಗೆ ಸರಕಾರ ಗಮನ ಕೊಡುತ್ತಿಲ್ಲ. ಬಹು ಜಾಗ್ರತೆಯಾಗಿ ಉತ್ತಮವಾಗಿರತಕ್ಕ ಭೂಮಿಗಳಿಂದ ಇಲ್ಲಿ ಎರಡು ಬೆಳೆಗಳನ್ನು ಮಾಡುವ ಅವಕಾಶಗಳಿದ್ದರೂ ಮತ್ತು ಸರಕಾರದ ಮುಂದೆ ಇದರ ಬಗ್ಗೆ ಸುಮಾರು ಎರಡು ವರ್ಷಗಳಿಂದಲೂ ಇದಕ್ಕೆ ಬೇಕಾಗುವ ಅಂದಾಜುಗಳೂ, ಸಿದ್ಧವಾಗಿರುವ ಯೋಜನೆಗಳೂ ಇವೆ. ಇಷ್ಟು ಇದ್ದರೂ ಸರಕಾರ ಇದರ ಕಡೆಗೆ ಗಮನಕೊಟ್ಟು ಒಂದನ್ನೂ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಇದೂ ಅಲ್ಲದೆ ಸೀ ಐಲೆಂಡ್ ಹತ್ತಿಯನ್ನು ಅಮೆರೀಕಾ ಹಾಗೂ ಇತರ ಪರದೇಶಗಳಿಂದ ನಮ್ಮ ದೇಶದವರು ತರಿಸಿಕೊಳ್ಳುತ್ತಿದ್ದಾರೆ. ಇದನ್ನು ನಮ್ಮಲ್ಲೇ ಬೆಳೆಯುವ ಅವಕಾಶಗಳಿವೆ. ಇದರ ಕಡೆಗೆ ನಮ್ಮ ಸರಕಾರದವರು ಹೆಚ್ಚು ಗಮನ ಕೊಡಬೇಕಾಗಿದೆ. ಅಲ್ಲದೆ ನಾವು ಮಾಡಿರುವ ಯೋಜನೆಗಳು ಫಲ ಪ್ರದವಾಗಬೇಕಾದರೆ ಬೆಳೆಯುವವರಿಗೆ ನೀರಾವರಿಗಾಗಿ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ನಾನು ಸರ್ಕಾರದವರನ್ನು ಇವೆಲ್ಲ ಕೆಲಸಗಳನ್ನೂ ಒಂದೇ ಜಿಲ್ಲೆಯವರಿಗಾಗಿಯೇ ಮಾಡಿಕೊಡಬೇಕೆಂದು ಹೇಳುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲಿಯೂ ಉತ್ತಮವಾದ ಕೈಗಾರಿಕೆಗಳನ್ನು ಮಾಡಲು ನೀರಾವರಿ ಕೆಲಸಗಳನ್ನು ಮಾಡಲು ಅವಕಾಶಗಳಿವೆ. ಎಲ್ಲಾ ಜಿಲ್ಲೆಗಳಲ್ಲಿಯೂ ನೋಡಿಕೊಂಡು ಅಲ್ಲಿ ಸಣ್ಣ ನೀರಾವರಿ ಕೆಲಸಗಳಿಗೆ ಹೆಚ್ಚು ಪ್ರಾಧ್ಯಾನತೆ ಕೊಟ್ಟು ಅದನ್ನು ಪೂರೈಸುವುದರ ಕಡೆ ಗಮನ ಕೊಡಬೇಕು. ನಮ್ಮ ನಾಲ್ಕನೇ ಯೋಜನೆಯಲ್ಲಿ ನಡೆಯಬೇಕಾಗಿರುವ ಕೆಲಸಗಳಲ್ಲಿ ಈಕ್ವಿಟಬಲ್ ಡಿಸ್ಟ್ರಿಬೂಷನ್ ಮೇರೆ ಒಂದು ನ್ಯಾಯವಾದ ದೃಷ್ಟಿಯಿಂದ ಯಾವ ಯಾವ ಕೆಲಸಗಳು ಯೋಗ್ಯವಾದವು ಅವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಒಂದು ಸಮಗ್ರ ಯೋಜನೆಯನ್ನು ಹಾಕಿಕೊಂಡು ಕೆಲಸಗಳನ್ನು ಮಾಡುವುದರ ಲಕ್ಷ್ಯಕೊಡಬೇಕು. ಇದರಲ್ಲಿ ಸರಕಾರ ಯಾವ ರಾಜಕೀಯ ಪ್ರಭಾವಗಳಿಗೂ ಒಳಗಾಗಬಾರದು. ಹಾಗೆ ಮಾಡಿದರೆ ಎಲ್ಲ ಕೆಲಸ ಕಾರ್ಯಗಳೂ ನಡೆಯಲು ಅನುಕೂಲವಾಗುತ್ತದೆ ಮತ್ತು ಇದರಿಂದ ಒಂದು ಇಂಪ್ರೂವ್‌ಮೆಂಟ್ ಕೂಡ ಆಗುತ್ತದೆ. ಜೊತೆಗೆ ಕಾಲಾವಕಾಶವನ್ನು ಮೀರದ ರೀತಿಯಲ್ಲಿ ಪ್ರತಿಯೊಂದು ಯೋಜನೆಯನ್ನೂ ನಡೆಸಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಪ್ಯಾಟರ್ನಿನಲ್ಲಿ ನಾವು ಹೋಗಬೇಕೆನ್ನುವ ಒಂದು ಆದರ್ಶವನ್ನು ಇಟ್ಟುಕೊಂಡಿದ್ದೇವೆ. ಇದನ್ನು ಜಾರಿಗೆ ತರಬೇಕಾದರೆ ನಾನಾಗಲೇ ಹೇಳಿದ ಹಾಗೆ ತೆರಿಗೆಗಳನ್ನು ಕೊಡತಕ್ಕ ಶ್ರೀಮಂತರುಗಳಿಂದ ಹೆಚ್ಚಿನ ತೆರಿಗೆಗಳನ್ನು ಹಾಕಿ ಬಡ

ಜನಗಳಿಗೆ ಅವರ ಮಟ್ಟಕ್ಕೆ ನಿಲುಕುವ ರೀತಿಯಲ್ಲಿ ನೆರವನ್ನು ಕೊಡಿ. ಇದಕ್ಕೆ ಅನುಕೂಲವಾಗುವಂತೆ ಯೋಜನೆಗಳನ್ನು ಮಾಡಿದರೆ ಅವು ಯಶಸ್ವಿಯಾಗಿ ನಡೆಯಲು ಅವಕಾಶವಾಗುತ್ತದೆ. ಅನೇಕ ಶಾಖೆಗಳಲ್ಲಿ ನಾವು ಈಗ ನೋಡಿದರೆ ಮೇಲಿನ ದರ್ಜೆಯ ಅಧಿಕಾರಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ಉದಾಹರಣೆಯಾಗಿ ಈಗ ಕೋ-ಆಪರೇಟೀವ್ ಇಲಾಖೆಯನ್ನು ನೋಡಿದರೆ ಇಲ್ಲಿ ಸುಮಾರು 18 ಜನ ಜಾಯಿಂಟ್ ರಿಜಿಸ್ಟ್ರಾರುಗಳು ಎಂದಿದ್ದಾರೆ. ಇನ್ನೂ ಒಬ್ಬರನ್ನು ಹೆಚ್ಚು ಮಾಡುವುದರಲ್ಲಿದ್ದಾರೆ, ಎಂದರೆ 19 ಜನ ಜಾಯಿಂಟು ರಿಜಿಸ್ಟ್ರಾರುಗಳಾದರು. ಇದರಲ್ಲಿ ಒಂದೊಂದು ಭಾಗಕ್ಕೆ ಒಬ್ಬೊಬ್ಬರು ಬೇರೆಯಾಗಿರಬೇಕೆಂದು ಮಾಡಿದ್ದಾರೆ. ಕನ್ಸೂಮರ್ಸ್ ಕೋ ಆಪರೇಟೀವ್ಸ್ ಶಾಖೆಗೆ ಒಬ್ಬರು ಜಾಯಿಂಟು ರಿಜಿಸ್ಟ್ರಾರವರು ಎಂದ ಹೀಗೆ ಬೇರೆ ಬೇರೆ ಬಾಬಿಗೆ ಒಬ್ಬೊಬ್ಬರಂತೆ ನೇಮಿಸಿದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲೂ ಕೂಡ ಮೊನ್ನೆ ಒಬ್ಬರನ್ನು ಇಲ್ಲಿ ಜಾಯಿಂಟು ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟಿಗಾಗಿ ನೇಮಕ ಮಾಡಿದ್ದಾರೆ. ಇದನ್ನು ನೋಡಿದರೆ ಟಾಪ್ ಹೆವಿ ಎನ್ನುವಂತೆ ಈ ಇಲಾಖೆಯಲ್ಲಿ ಅಧಿಕಾರಿಗಳು ಹೆಚ್ಚಾಗಿದ್ದಾರೆ. ಹೀಗೆ ನಮ್ಮ ವಿದ್ಯಾ ಇಲಾಖೆಯಲ್ಲಿ ಕೂಡ ನೋಡಿದರೆ ಜಾಯಿಂಟು ಡೈರೆಕ್ಟರುಗಳ ಸಂಖ್ಯೆ ವಿಪರೀತವಾಗಿ ಏರಿದೆ. ಟಾಪ್ ಹೆವಿ ಆಗಿ ಇಷ್ಟು ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡಿರುವುದರಿಂದ ಸರಕಾರದ ಸಂಪತ್ತು ಇಂತಹ ಉನ್ನತ ದರ್ಜೆಯ ಅಧಿಕಾರಿಗಳಿಗಾಗಿ ದೊರೆಯುತ್ತಲಿವೆ ಮತ್ತು ಹೆಚ್ಚು ಹಣ ಇದಕ್ಕಾಗಿ ಇಲ್ಲಿ ಖರ್ಚಾಗುತ್ತಿದೆ. ಇಷ್ಟೊಂದು ಟಾಪ್ ಹೆವಿ ಎಕ್ಸ್‌ಪೆಂಡಿಚರ್ ಆಗಿ ಇಷ್ಟು ಅಧಿಕಾರಿಗಳನ್ನು ನೇಮಿಸಿರುವುದರಿಂದಾಗಿ ದೇಶದ ಆಡಳಿತದಲ್ಲಿ ದಕ್ಷತೆ ಹೆಚ್ಚಾಗಿದೆಯೋ ಎನ್ನುವುದನ್ನು ನೋಡಿದರೆ ಯಾವ ರೀತಿಯಿಂದಲೂ ಅನುಕೂಲವಾಗಿಲ್ಲ. ಇದೇ ರೀತಿ ನಮ್ಮ ವ್ಯವಸಾಯದ ಇಲಾಖೆಯನ್ನು ತೆಗೆದುಕೊಂಡರೆ ಇಲ್ಲೂ ಕೂಡ ಮೇಲಿನ ದರ್ಜೆಯ ಅಧಿಕಾರಿಗಳೇ ಬಹಳ ಹೆಚ್ಚಾಗಿದ್ದಾರೆ. ಕಳೆದ ಆರು ವರ್ಷಗಳಿಂದಲೂ ನಮ್ಮ ವ್ಯವಸಾಯದ ಇಲಾಖೆಯವರಿಂದ ಬೆಳೆಯುವವರಿಗೆ ಹೆಚ್ಚು ಬೆಳೆ ಮಾಡಲು ಏನಾದರೂ ಸೌಕರ್ಯಗಳನ್ನು ಮಾಡಿಕೊಟ್ಟಿದ್ದಾರೆಯೋ ಎಂದರೆ ಏನೂ ಮಾಡಿಲ್ಲ. ಈ ಇಲಾಖೆಯಿಂದ ಜನಗಳಿಗೆ ಸ್ಫೂರ್ತಿ ಬರುವ ರೀತಿಯಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಈ ಇಲಾಖೆಯವರು ಜನಗಳಲ್ಲಿ ಸಂಪರ್ಕ ಹೊಂದಿ ಒಂದು ರೀತಿಯ ಸ್ಫೂರ್ತಿ ಪಡೆದು ಸೇವಾ ಮನೋಭಾವದಿಂದ, ದೇಶ ಪ್ರೇಮದಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆಯೋ ಎಂದು ನೋಡಿದರೆ ಇಲ್ಲಿ ಏನೂ ಆಗಿಲ್ಲ ಎನ್ನುವುದು ಎಲ್ಲರಿಗೂ ಕಂಡುಬರುತ್ತದೆ. ವ್ಯವಸಾಯದ ಇಲಾಖೆಯಲ್ಲಿ ನಾವು ಮೂರು ನಾಲ್ಕು ವರ್ಷಗಳಿಂದ ಏನು ನೋಡುತ್ತಿದ್ದೇವೆಂದರೆ, ಇಲ್ಲಿರುವ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟುಗಳು ಸರಿಯಾಗಿಲ್ಲ ಇಂಟರ್‌ಸ್ಟೇಟು ಲಿಸ್ಟು ಸರಿಯಾಗಿಲ್ಲ ಎಂದು ಒಬ್ಬರ ಮೇಲೆ ಒಬ್ಬರು ಅಧಿಕಾರಿಗಳಲ್ಲಿ ಅತೃಪ್ತಿ, ಜಾಸ್ತಿಯಾಗಿದೆ ಮತ್ತು ಒಂದು ರೀತಿಯಾಗಿ ಫ್ರಸ್ಟ್ರೇಟ್ ಆಗಿದ್ದಾರೆ ಮತ್ತು ಇಲ್ಲಿರುವ ಅಧಿಕಾರಿಗಳಲ್ಲಿ ಒಂದು ರೀತಿಯಾದ ಅತೃಪ್ತಿ ಹಾಗೂ ನಿರಾಶೆ ಜಾಸ್ತಿಯಾಗಿರುವುದನ್ನು ಕಾಣುತ್ತಿದ್ದೇವೆ. ಇಂತಹ ಅಧಿಕಾರಿಗಳಿಂದ ಇಲ್ಲಿ ತೃಪ್ತಿಕರವಾದ ಕೆಲಸಗಳು ನಡೆಯಲು ಸಾಧ್ಯವೇ ! ವ್ಯವಸಾಯದಂತಹ ಒಂದು ಮುಖ್ಯ ಇಲಾಖೆಯಲ್ಲಿ ಹೆಚ್ಚಿನ ಉತ್ಪತ್ತಿ ಬರಬೇಕು ಇಲ್ಲಿರುವ ಅಧಿಕಾರಿಗಳು ಜನಕ್ಕೆ ಸರಿಯಾದ ಮಾರ್ಗದರ್ಶನ ನೀಡುವ ರೀತಿಯಲ್ಲಿ ಇರಬೇಕು. ಅಧಿಕಾರಿಗಳಲ್ಲಿ ಇಂತಹ ಮನೋಭಾವ ಹೆಚ್ಚಿದರೆ ಜನಗಳಿಗೂ ಇದರಿಂದ ಅನುಕೂಲವಾಗುತ್ತದೆ. ಮತ್ತು ಹೆಚ್ಚು ಉತ್ಪಾದನೆ ಮಾಡಲು ಸಹಾಯವಾಗುತ್ತದೆ ಒಟ್ಟಿನಲ್ಲಿ ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕಾದರೆ ಇಲಾಖೆಗಳಲ್ಲಿ ಆಗಾಗ್ಗೆ ಮೇಲಿನ ಅಧಿಕಾರಿಗಳು ಸೂಪರ್‌ವೈಸ್ ಮಾಡುವವರು ಸರಿಯಾಗಿ ತನಿಖೆ ಮಾಡಿ ಯೋಜನೆಗಳನ್ನು ಮಾಡಿರುವುದನ್ನು ಸರಿಯಾಗಿ ಮಾಡುತ್ತಿದ್ದಾರೆಯೋ ಇಲ್ಲವೇ ಎನ್ನುವುದನ್ನು ಆಗಾಗ್ಗೆ ವಿಮರ್ಶೆ ಮಾಡಬೇಕು ಮತ್ತು ಅದಕ್ಕೆ ಸಾಕಷ್ಟು ಹಣ ಒದಗಿಸಬೇಕು. ಅಲ್ಲದೆ ತಾವು ಈಗ ಒದಗಿಸಿರುವ ಹಣಕ್ಕೆ ಎಸ್ಟಿಮೇಟುಗಳು ತಯಾರಾದ ಮೇಲೆ ಕೆಲಸಗಳನ್ನು ಆರಂಭ ಮಾಡಿ, ಅರ್ಧಕ್ಕೆ ಬಿಡದೇ ಪೂರ್ತಿಯಾಗುವ ಹಾಗೆ ಒಂದು ನಿರ್ದಿಷ್ಟಕಾಲದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಯೋಜನೆಗಳನ್ನು ಒಂದು ಕಾಲದೊಳಗೇ ಮಾಡಬೇಕೆಂದು ಆರಂಭಿಸಿದ ಮೇಲೆ ಶತಾಯ ಗತಾಯ ಅದನ್ನು ಆ ಕಾಲದೊಳಗೆ ಪೂರೈಸುವಂತೆ ಏರ್ಪಾಡು ಮಾಡಬೇಕು. ನಾನು ನಮ್ಮ ತಾಲ್ಲೂಕಿನಲ್ಲಿ ಸುಮಾರು ಐದು ವರ್ಷಗಳಿಂದಲೂ ಒಂದು ಕೆಲಸವಾಗಬೇಕೆಂದು ಸರಕಾರಕ್ಕೆ ಹೇಳುತ್ತ ಬರುತ್ತಿದ್ದೆ. ಈಚೆಗೆ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ನಮ್ಮ ಭಾಗದಲ್ಲಿ ಪ್ರವಾಸ ಬಂದಾಗ ಇದರ ಬಗ್ಗೆ ಹೇಳಿ ತೋರಿಸಿದಾಗ ಅವರು ಅಲ್ಲಿದ್ದ ಅಧಿಕಾರಿಗಳನ್ನು ಕೂಡಲೇ ಕರೆಸಿ ಇಲ್ಲಿ ಕಂಟ್ರಾಕ್ಟರುಗಳು ಮೋಸ ಮಾಡುತ್ತಿದ್ದಾರೆಂಬುದನ್ನು ಪರಿಶೀಲನೆ ಮಾಡಿ ಅವರಿಗೆ ಸರಿಯಾದ ನಿರ್ದೇಶನ ಕೊಟ್ಟು ಆರು ತಿಂಗಳಲ್ಲಿ ಇಲ್ಲಿನ ಕೆಲಸ ಮುಗಿಸಬೇಕೆಂದು ಹೇಳಿಬಂದರು. ಆ ಕೆಲಸ ಐದು ವರ್ಷಗಳಿಂದಲೂ ಆಗದೇ ಇದ್ದುದು ಆರು ತಿಂಗಳಲ್ಲಿ ಮುಗಿಯಲು ನಮ್ಮ ಮಾನ್ಯ ಮಂತ್ರಿಗಳು ಸಹಾಯ ಮಾಡಿದರು. ಹಿಂದೆ ನಮ್ಮಲ್ಲಿ ಅಂತಹ ಅಧಿಕಾರಿಗಳು ಪ್ರವಾಸ ಬಂದಾಗ ಆ ರೀತಿಯಾಗಿ ಇನ್ಸ್‌ಪೆಕ್ಷನ್ನು ಮಾಡಿ ಅಧಿಕಾರಿಗಳಿಗೆ ಸೂಕ್ತವಾಗಿ

(ಶ್ರೀಜಿ. ಎ. ತಿಮ್ಮಪ್ಪ ಗೌಡ)

ನಿರ್ದೇಶನ ಕೊಡುತ್ತಿದ್ದರು. ಈಗಲೂ ಕೂಡ ಮಂತ್ರಿಗಳು ಆಗಾಗ್ಗೆ ಅಲ್ಲಲ್ಲಿ ಪ್ರವಾಸ ಹೋದಾಗ ಇರಿಗೇಷನ್ನು ಪ್ರಾಜೆಕ್ಟುಗಳನ್ನು ತನಿಖೆ ಮಾಡಿ ಆದಕ್ಕೆ ಕೊಟ್ಟಿರುವ ಟೈಂ ಎಷ್ಟು, ಅದನ್ನು ಪೂರೈಸಿದ್ದಾರೆಯೋ ಎಂದು ನೋಡಿ.

"Take six months or one year more; What are the facilities that you require; Take all those facilities but I must see that this project is completed within such and such a period; Otherwise I will dismiss you". ಎಂದು ಅವರಿಗೆ ಹೇಳಿ ಹಿಂದೆ ಅಧಿಕಾರಿಗಳು ಕೆಲಸಗಳನ್ನು ಮಾಡಿಸುತ್ತಿದ್ದರು. ಈಗಲೂ ನಮ್ಮ ಸರಕಾರದವರು ಆ ರೀತಿಯಾದ ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಯೋಜನೆಯನ್ನು ತೆಗೆದುಕೊಂಡ ಮೇಲೆ ಅದನ್ನು ನಿರ್ದಿಷ್ಟಕಾಲದಲ್ಲೇ ಮುಗಿಸುವಂತೆ ಮಾಡಬೇಕು. ಒಂದು ಕೆಲಸಕ್ಕೆ ಆರು ತಿಂಗಳಿಗೆ ಹೆಚ್ಚು ಕಾಲವನ್ನು ತೆಗೆದುಕೊಳ್ಳಕೂಡದು ಎಂದು ನಿಗದಿ ಮಾಡಿದ್ದರೆ ಆ ನಿಗದಿಯಾದ ಕಾಲದಲ್ಲೇ ಆ ಕೆಲಸಗಳನ್ನು ಪೂರೈಸಬೇಕು. ಹಾಗೆ ಮಾಡಿದರೆ ಅದರಿಂದ ನಮಗೆ ಬರತಕ್ಕ ರಿಟರ್ನ್ ಕೂಡ ಸರಿಯಾಗಿ ಬರುತ್ತದೆ. ಈಗ ಫೈನಾನ್ಷಿಯಲ್ ಟಾರ್ಜೆಟ್ 50 ಸಾವಿರ ರೂಪಾಯಿ ಎಂದು ತೋರಿಸುತ್ತೀರಿ. ಫಿಸಿಕಲ್ ಟಾರ್ಜೆಟ್ ಇರುವುದಿಲ್ಲ, ಆದಕ್ಕೇ ಮೂರನೇ ಪಾಂಚವಾರ್ಷಿಕ ಯೋಜನೆ ವಿಫಲವಾಗಿದೆ. ಆದುದರಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆ ಜಯಪ್ರದವಾಗಿ ಅದರ ವಿಫಲ ಜನಗಳಿಗೆ ಸಂಪೂರ್ಣವಾಗಿ ದೊರೆಯುವಂತೆ ಮಾಡಲು ಸರಕಾರದವರು ಮತ್ತು ಸಾರ್ವಜನಿಕರು ಕೂಡ ಸಹಕರಿಸಿ ಕೆಲಸ ಮಾಡೋಣ. ನಾಲ್ಕನೇ ಯೋಜನೆ ಜಯಪ್ರದವಾಗಿ ದೇಶ ಸಂಪತ್‌ಭರಿತವಾಗಿ ಸುಖದಿಂದ ಇರುವಂತೆ ನಾವೆಲ್ಲರೂ ಶ್ರಮಿಸೋಣ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11-00 A.M.

†**Sri ANNARAO GANAMUKHI** (Afzalpur).—Speaker Sir, the Fourth Plan figures, which have been given to us I think, are in keeping with the indication of the Planning Commission and we are called upon to discuss this Fourth Plan allocation, provisions, etc., because the Government is going to discuss the plan with the Planning Commission or with the Government of India or with the National Development Council. I should say Sir, there are two considerations with regard to the plans. One is that this Fourth Plan or Fith Plan whatever the plan, it should not coincide with the election year because the promises which cannot be fulfilled, achievements which cannot be achieved and all these are held out for the people. Such promises are held out before the people so that the party in power may catch votes. This is an unrealistic approach and therefore I should say the planning instead of restricting to 5 years it must be extended to 6 years so that it may not coincide with the election year.

Another thing which I should like to say Sir, is that planning should not be too much centralised. Here one thing becomes very clear *i.e*,, the Central Government or the Planning Commission Members and the Chief Ministers of all the States and the National Development Council put together arrive at tentative conclusions after due deliberations and place them before the Parliament. Here the constitutional postion is very clear that is to say as far as Central subjects are concerned, let it be made clear, that it is the Central Government and the Parliament which can take a final decision. But so far as the State subjects are concerned the Planning Commission and Central

Government should not dictate terms. They are dictating terms that this should be included in the plan and this should not be incuded in the plan. They are encroaching upon the constitutional rights of the State Governments. Many people pleaded in the Rajya Sabha that as far as the States subjects are concerned they should be entirely left to the State Governments and the State Government can help the Planning Commission so that they may prepare another plan depending upon the resources not only of the States but also the grants and loans which they are going to get at the Central level. But much centralisation has allowed the plan to wilderness. The Government or the party in power is riding on the plan itself sitting like a tiger i.e., plan tigers against the assessments. Planning is therefore anything and everything. But what is happening is the achievements or the objectives of the plans are not realised. The implementation machinery is not functioning well. As far as the administration is concerned, the Government itself thinks that proper steps have not been taken to improve the administrative machinery and this is one of the causes for defective planning. The popular participation is not there. Plans have been finalised by the working groups set up by the State Government and that plan which has been prepared by the working groups have been taken up by the Planning Commission. What is the popular participation of the people in the plan ? Here I think we cannot effectively put forth our views on the plan schemes. It is the question of embodying all aspirations and ambitions and that is being hustled through. Even while formulating the third plan, committees functioned and they gave their proposals and the Third plan was formulated. Afterwards the deliberations and report came before the House and the third plan was finalised. That is not the way. If the Government wants to have popular feelings, it should not hustle through programmes. There is a question of financial commitments. The deliberation at the Committee level and deliberation at the House level-there is some difference between the two. Therefore, I am not saying anything in an objectionable way. Government should have suggested this method and constituted some committees here and taken the views of Members who are well-informed on various subjects. That would have enabled the Government to reach certain good conclusions. Instead of doing that, we are inflating the plan like a balloon. If the target is. Rs. 250 crores in the present Plan, it is going to be Rs.500 crores in the Fourth Plan. I think, in the Fifth Plan it will be 1,100 crores. We are inflating figures like anything. It is like inflating a balloon blown beyond elastic limit and we do not know when it will burst.

MR. SPEAKER.—Does the Member mean that there is increase in the aggregate amount spent in the First Five-Year Plan, the Second Five-Year Plan and the Third Five-Year Plan ? Inflation conveys some other idea.

Sri ANNA RAO GANAMUKHI.—We are not reaching that stage. We have not achieved that. We have not come nearer to it. That is why the Plan is not yielding anything.

Mr. SPEAKER.—If the Member wants to go to Bidari, he has to cover the distance in several stages.

Sri ANNA RAO GANAMUKHI.—Even that, we are not doing well; that is the difficulty. I am not saying this simply for the sake of opposition. There are fact and figures. Even the Government concede that there are shortcomings. We know there are shortcomings and failures at the implementation stage. If we shift the responsibility to any officer or anybody for the shortcomings, why should we have a big plan ? Why should we have plan which is defective and which we cannot implement ? Such planning is no good at all.

Let me go to agriculture. This Plan Book gives the figures. The targe for the Third Plan for foodgrains is 10,02,000 tons. If we take into account all the figures here, the shortfall is about 1,15,000 tons. As far as I know, these figures also are very defective. These facts and figures, which have beed obtained from the District level, have all been supplied by the Gram Sevaks. In urban compost, the target was 4,25,000 tons but the production is only 1,68,000 tons. Why should we have such a target ? A target which we cannot achieve.

Mr. SPEAKER.—Does he seriously suggest that this is a big target for a period of five years ?

Sri ANNA RAO GANAMUKHI.—Then, why such shortfall ? I submit I do not mind if the shortfally is 5 per cent this side or that side. The achievement falls far short of expectation. The reasons for the shortfall should be given convincingly. The Government must say that this shortfall was due to such and such circumstances. For rural compost, the target was 53,80,000 tons ; the achievement is 11,67,000 tons. Is there any relation between the target and the achievement ? The responsibility for the shortfall must be fixed. Once you fix the target, the responsibility should be fixed upon some officer or somebody or the other who is the implementing authority. Anyway, it is clear that the target was not achieved. For green manure, the target was 7,50,000 acres ; the achievement is only 4,00,000 acres ; it is only 50 per cent.

About the distribution of fertilisers, if we go year by year, the Plan Book shows that it is only 60 or 62 per cent. The indent is for more but the quantity allotted is less. The supply received is still less. The quantity distributed is still less.

Mr. SPEAKER.—So the suggestion he makes is, make it still lower.

Sri ANNA RAO GANAMUKHI.—What I say is that there should be some harmony or co-ordinatin ; do not have such unrealistic targets ? Have real target. If the target is fixed with the consent of the Planning Commission and the Government of India, then it is their bounden duty to supply the fertllisers to the extent promised. Otherwise, it is bound to be a failure it is not possible to attain targets which are unrealistic.

Mr. SPEAKER.—When I appeared for examination, I did not know whether I would pass or fail.

Sri ANNA RAO GANAMUKHI.—Having regard to practicality, we suggest to the Government tha they formulate realistic targets. Seeing Government's shortcomings in the Third Plan, if they go on repeating the same state of affairs and set up the same target and follow the same steps, no Plan will yeild any result. Let the Government take a lesson from their shortcomings. At the State level, we see that the administrative machinery has not been geared up to see that the Plan is implemented in full. There is no implementation of the plans and schemes because everybody is held responsible for implementing them with the result nobody takes responsibility. Besides, on evaluation is made. We are told, one evaluation machinery has been set up. I think, the Evaluation Committee, which has been set up by the Planning Commission is doing some useful work by attending to various shortcomings. I know what type of work our evaluation machinery has done. I doubt the capacity of our evaluation machinery. They must be put on independent footing. Unless they independent of the Government, they do not show any shortcoming on the part of the Government. If an Under Secretary is put as Evaluator, I do not think he will be able to see the shortcomings in any particular Department and bring it to light. Unless the responsibility is fixed for effective implementation on a particular official, the target which we fix here and the money which we are going to spend, will yield on result.

This Plan also presupposes that will give percent returns. So far, during the Third Plan, our growth only 3. 6 per cent. If national income falls short by 50 per cent, then I think the target is not achieved, and the whole blame for the failure is cast on rains or seasonal conditions or something of the sort, This should not be the case. The Plan implementation machinery should be tightened.

There are other things. We have fixed, for instance the financial target as Rs. 500 crores. Now, if we see the price increase during all these five years or the next five years, we will have to give a margin of 20 per cent for increase in prices and that reflect on the Plan. It means, the Plan will effectively be Rs. 400 crores and not Rs. 500 crores because of the inflation and price increase.

Mr. SPEAKER.—Supposing it is made Rs. 600 crores, then it becomes Rs. 5 0 crores.

Sri ANNA RAO GANAMUKHI.—Yes, this Rs. 500 crores will come to Rs. 400 crores. That is the modest estimate we are making. If the prices go still higher, what will happen ? For instance, the industrices are producing many things. If we see the cost, we will be simply amazed. If we take sugar, seeing the international market, the Government of India has raised the excise duty by 30 per cent. We want to encourage industry. But it is not possible. If we want to export any article, it should compete with the international market. If these are the conditions obtaining in our country, how can our articles compete with foreign articles I do not think that the State Government is responsible for all these ills. The State Government, the Central

(SRI ANNA RAO GANAMUKHI)

Government and the Planning Commission put together should take this blame for the prices. There is production but at what cost ? You cannot say that licences to such of the industrialists who can say definitely that the cost of production will be so much and that the articles produced can compete with international price.

If they given an undertaking to that extent, then alone these industrialists should be given licence. Otherwise, the Government should say 'no'. Unless this is done, I do not think Sir, there is any use whatsoever. This will check leakages and loopholes and other wastages. That might even come to 30 per cent. So, the plan which is Rs. 500 crores will be effectively only Rs. 350 crores. Due to inflation in prices, I do not think the Plan will succeed. Sir, have we given any national minimum to the people ? That is another question ? because we do social justice by progresssively reducing inequality in income and wealth ; we cannot do any social justice to the people by that ; we will have to provide something for the old, something for the weak, something for the poor, something for the handicaped and sick and some allowance has to be provided to the unemployed. Are not democratic government elsewhere doing some justice to the old people who may not afford to maintain themselves ? They are being given some pensions and those people who are unemployed throughout the year are being given some doles. Here, let me say Sir, in this welfare State, if you go to the Railway Station, you will see beggers are let loose on the pavement like anything. Have the Government taken any welfare measures to support them and drive them form the platforms ? Have you provided anything for the unemployed pepople ? Their number is piling up like anything. Social security also will have to be included in this. Our plans have failed completely. That is the reason why there is no selfgenerating economy. We are putting burdens on the people. We are imposing taxes on them day in and day out. We are moblising all resources and we are also indirectly raising the prices because the taxes on the commodities get themselves into the price and so the prices have swelled as a result of these taxes. I do not grudge any direct taxes imposed on wealthy people but by imposing taxes on commodities you will be increasidg the prices. Then it will be a problem for Mr. Devaraj Urs. There is a demand for increase of wages and increase in dearness allowance as a result of that. You must freeze that. Unless that is done, unless you fresze the prices there is no other go than increasing prices. It prices increass, what will happen ? Plan also will fail. In this respect, I should say Sir, that the Government also should have some priority in spending. Every Department want to spend. That malady should go. Khadiwala wants money education department wants more Universities. In a poor country, where was the necessity for establishing a Bangalore University ? We could have managed with Mysore University and Karnataka University. So many non-plan things are coming up here. Then we

say we are lacking money for the plan. Every taxations measure that comes up before this House has a request embodied in it that money is required for the Plan. That is the cry. It you require money, what about wastages? If you increase the income of the people, I have no grudge whatsoever. But what is happening is, there is no increase in the income of the people whatever and whatever income is got goes to the pockets of the rich. We are feeding through these plans-contractors, smugglers and big indurstrialists and corrupt people. We are doing nothing more than that. By so doing, we are imposing more taxes on the people. This has resulted in increase in prices. Therefore, Sir, I should say that our plan should be resalistic. Implementation machinery should be geared up and all the unecessary expenditure should be stopped. They are going to start munsiff courts. Whithout these munsiff courts we have managed so far. The malady is because you are doing that, we have to do this. If you want to run the Government on efficient lines, you must fix priority and spend money only on priorty. If you take this attitude then and then alone you will be reaching the target. Otherwise targets will be reached and you will not get any return.

11-30 A. M.

ಶ್ರೀ ಎ. ಆರ್. ಪಂಚಗಾವಿ (ಗೋಕಾಕ್ II).—ಸ್ವಾಮಿ, ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವಾರ ಈಗಾಗಲೇ ಕಳೆದು ಹೋಗಿದೆ. ಮೊದಲನೇ ವಾರದಲ್ಲಿ 500ಕೋಟಿ ರೂಪಾಯಿ ಯೋಜನೆ ಇದ್ದುದು 537ಕ್ಕೆ ಏರಿಸಿದೆ ಎನ್ನುವ ಒಂದು ವಾದವನ್ನು ಸರ್ಕಾರ ನಮ್ಮ ಮುಂದೆ ಇಟ್ಟಿದೆ, ಮೊದಲನೇ ವಾರವಲ್ಲಿ ಕೇಂದ್ರದಲ್ಲಿ ನಡೆಯುತ್ತಾ ಇರುವುವನ್ನು ನೋಡಿದರೆ, ಯೋಜನೆಗಳು ಎಷ್ಟರಮಟ್ಟಿಗೆ ಇದೇ ಸ್ಥಿತಿಯಲ್ಲಿ ಉಳಿಯುತ್ತದೆ ಎನ್ನುವುದು ಸಂಶಯದ ಮಾತಾಗಿದೆ. ಕೇಂದ್ರದ ವಿದ್ಯಾ ಇಲಾಖೆ ಯೋಜನೆಯಲ್ಲಿ ಒಂದು ದೊಡ್ಡ ಕಡಿತ ಆಗಿರುವುದನ್ನು ಈಗತಾನೇ ಪೇಪರ್‌ನಲ್ಲಿ ನಾನು ಓದಿದೆ. ಈ ದೃಷ್ಟಿಯಿಂದ ನೋಡಿದರೆ ನಮ್ಮ ಯೋಜನೆಗಳಲ್ಲಿ ಮಾಡಿದ ವ್ಯವಸ್ಥೆ ಎಷ್ಟರಮಟ್ಟಿಗೆ ಉಳಿಯುತ್ತದೆ ಎನ್ನುವುದು ಸಂಶಯದ ಮಾತಾಗಿದೆ. ಕೆಲವು ಮಟ್ಟಿಗೆ, ಯೋಜನ ಮುಖ್ಯವಾಗಿ ರೈತರ ಪರಿಸ್ಥಿತಿ ಸುಧಾರಿಸಲಿಕ್ಕೆ ಮಾಡಿದ್ದು ಆಗಿದೆ ಎಂದು ಹೇಳುತ್ತಾ ಇದ್ದಾರೆ. ಆ ಪ್ರಕಾರ ಯೋಜನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅವನ್ನು ಸರ್ಕಾರ ನಮ್ಮ ಮುಂದೆ ಇಟ್ಟಿದೆ. ವಕ್ಕಲುತನ ನೋಡಿದರೆ 3800 ಲಕ್ಷ ಇದ್ದುದು 34½ ಲಕ್ಷಕ್ಕೆ ಬಂದಿದೆ. ಉತ್ಪಾದನಾ ದೃಷ್ಟಿಯಿಂದ ನೋಡಿದರೆ, ಈ ವಕ್ಕಲುತನದ ಉತ್ಪಾದನೆಗೆ ಪ್ರಾಧಾನ್ಯತೆ ಕೊಡುತ್ತಾ ಇರುವಾಗ ಈ ಬಾಬಿನಲ್ಲಿ ಕಡಿತ ಏತಕ್ಕೆ ಆಗಬೇಕು ಎನ್ನುವುದು ತಿಳಿಯದ ಮಾತು. ಎರಡನೆಯ ಬಾಬು ಮೈನರ್ ಇರ್ರಿಗೇಷನ್ ತೆಗೆದುಕೊಂಡರೆ ಅದರಲ್ಲಿ ಸಾಕಷ್ಟು ಹಣ ಪೂರೈಸಲಾಗಿದೆ. 29 ಕೋಟಿ ರೂಪಾಯಿನಿಂದ 40 ಕೋಟಿ ರೂಪಾಯಿಯವರೆಗೆ ಏರಿಸಲಾಗಿದೆ. ಇದು ಮಹತ್ವದ ವಿಷಯ. ಸಣ್ಣ ನೀರಾವರಿ ಯೋಜನೆಗಳು ಎಲ್ಲಾ ಕಡೆಯೂ ಸಾಧ್ಯವಿದೆ. ಎಲ್ಲರಿಗೂ ಬೇಕಾದ ವಿಷಯ. ತ್ವರಿತವಾಗಿ ಫಲ ಕೊಡುವುದು ಮೈನರ್ ಇರ್ರಿಗೇಷನ್ ಈ ಬಾಬಿಗೆ 40 ಕೋಟಿ ರೂಪಾಯಿ ಮುಂದಿನ ವರ್ಷದಲ್ಲಿ ಖರ್ಚ ಮಾಡಲು ಶಕ್ಯ ಅದ್ದರಿಂದ ವಕ್ಕಲುತನದ ಉತ್ಪಾದನೆ ಜಾಸ್ತಿ ಆಗಿ ಕಾರ್ಖಾನೆಗಳಿಗೆ ಬೇಕಾದ ಹತ್ತಿ ಮುಂತಾದ ಕಚ್ಚಾ ಮಾಲುಗಳು ಉತ್ಪಾದನೆಗೆ ಸಹಾಯ ಆಗುವುದರಲ್ಲಿ ಸಂದೇಹವಿಲ್ಲ. ಇದೇ ದೃಷ್ಟಿಯಿಂದ ನೋಡಿದರೆ ಮೇಜರ್ ಮತ್ತು ಮೀಡಿಯಮ್ ಇರ್ರಿಗೇಷನ್ ಬಗ್ಗೆ ಕೊಟ್ಟ ಹಣ 80 ಕೋಟಿ ರೂಪಾಯಿ ಮಾತ್ರ ಏತಕ್ಕೂ ಸಾಲದು ಎನ್ನುವ ಮಾತನ್ನು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ. ಅನೇಕ ಯೋಜನೆಗಳು ಬಹಳ ಹಳೆಯ ಯೋಜನೆಗಳು. ಬಹಳ ದಿವಸದಿಂದ, ಜನತೆ ಅವುಗಳ ಮೇಲೆ ತಮ್ಮ ಜೀವನದ ಭವಿಷ್ಯವನ್ನು ಆಧಾರಮಾಡಿಕೊಂಡು ಅನೇಕ ರೀತಿಯ ಕನಸನ್ನು ಕಾಣುತ್ತಾ ಬಂದಿದ್ದಾರೆ. ನಮ್ಮ ಪಕ್ಕದಲ್ಲಿ ಘಟಪ್ರಭಾ ಯೋಜನೆಯನ್ನು ತೆಗೆದುಕೊಂಡರೆ ಅದು ಮೊದಲು ರೂಪಿತವಾದದ್ದು 1852ರಲ್ಲಿ. 1853ರಲ್ಲಿ ಸರ್ವೆ ಆಗಿದೆ, 1857ರಲ್ಲಿ ಸಣ್ಣ ಮಟ್ಟಿಗೆ ಕಟ್ಟಿದರೂ, ಖರ್ಚಾದುದು ಕೇವಲ 15 ಲಕ್ಷ

(ಶ್ರೀ ಎ. ಆರ್. ಪಂಚಗಾವಿ)

ರೂಪಾಯಿಗಳು. ಆದರೆ ಕಳೆದ 4-5 ವರ್ಷಗಳ ಬಡ್ಜೆಟ್ ನೋಡಿದರೆ, ಘಟಪ್ರಭಾ ಕೆನಾಲ್ ಸುಮಾರು 15 ರಿಂದ 20 ಲಕ್ಷ ರೂಪಾಯಿಯವರೆಗೆ ಆದಾಯ ಬರುತ್ತಾ ಇದೆ. ಈ ಘಟಪ್ರಭಾ ಯೋಜನೆಯ ಕಾಲುವೆ ಅಗೆಯಲಿಕ್ಕೆ 8 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. 1½ ಲಕ್ಷ ಎಕರೆಗಳಿಗೆ ನೀರಿನ ಸೌಲಭ್ಯವನ್ನು ಕೊಡಲಾಗಿದೆ. ನೀರನ್ನು ಪೂರ್ತಿ ಉಪಯೋಗ ಮಾಡುವುದಕ್ಕೆ ಸಾಧವಾಗಿಲ್ಲ. ಏಕೆಂದರೆ ಜಮೀನು ಏರು ಇಳಿತ ಇದ್ದು ಅದನ್ನು ಸಮನಾಗಿ ಮಾಡಿ, ಕಾಲುವೆ ವ್ಯವಸ್ಥೆ ಮಾಡಬೇಕಾದರೆ ಕೆಲವು ದಿವಸಗಳು ಹಿಡಿಯುತ್ತದೆ. ಘಟಪ್ರಭಾ ಜನರು ಲಾಭ ಪಡೆಯುತ್ತಿದ್ದಾರೆ. ದುರ್ದೈವವಶಾತ್ ಹೇಳಬೇಕಾದರೆ ಮಳೆಗಾಲದಲ್ಲಿ ನೀರನ್ನು ಹೊಳೆಯಲ್ಲಿ ಬಿಡುವುದರಿಂದ ನೀರಾವರಿಗೆ ಬೇಕಾದಷ್ಟು ನೀರು ಸಂಗ್ರಹ ಮಾಡಲು ಅವಕಾಶವಾಗಿಲ್ಲ. ಇಂತಹ ಬರಗಾಲದಲ್ಲಿಯೂ ಕಷ್ಟಪಟ್ಟು ಅಲ್ಲಿಯ ರೈತರು ಇಡೀ ದೇಶಕ್ಕೆ ಬೇಕಾದ ಹೈಬ್ರಿಡ್ ಮೇಜ್ ಮುಂತಾದ ಉತ್ತಮ ತರದ ಬೆಳೆಯನ್ನು ತೆಗೆದು ಹೆಚ್ಚಿನ ಲಾಭವನ್ನು ದೇಶಕ್ಕೆ ಒದಗಿಸಿಕೊಡುತ್ತಿದ್ದಾರೆ. ಆದರೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯ ಕಾಲುವೆ ಅಗೆಯುವುದು ಅಷ್ಟೇ ಇತ್ತು. ಎರಡನೇ ಯೋಜನೆಯಲ್ಲಿ ಘಟಪ್ರಭಾ ಯೋಜನೆಯ ಸೆಕೆಂಡ್ ಸ್ಟೇಜ್ ಎಂದರೆ ಕಾಲುವೆಯನ್ನು 41 ಮೈಲಿಯಿಂದ 73 ಮೈಲವರೆಗೆ ಪೂರ್ಣ ವಿಸ್ತರಿಸಿ ಐದು ಶಾಖೆಗಳನ್ನು ಪೂರ್ಣ ಮುಗಿಸಿದ್ದಾರೆ. ಇನ್ನು ಒಂದು ಸ್ಟೋರೇಜ್ ಡ್ಯಾಮ್ ಕಟ್ಟಬೇಕಾಗಿತ್ತು. ಈ ಯೋಜನೆ ಹಿಂದಕ್ಕೆ ಬಿತ್ತು. ದುರ್ದೈವವಶಾತ್ ಎರಡನೇ ಯೋಜನೆಯ ಸಮಯದಲ್ಲಿ ನಮ್ಮ ಪ್ರಾಂತ್ಯ ಹೊಸ ಪ್ರಾಂತ್ಯ ಆದಕಾರಣ, ಅದರಿಂದ ನಮ್ಮ ಘಟಪ್ರಭಾ ಯೋಜನೆಗೆ ಹೊಡೆತ ಬಿತ್ತು. ಘಟಪ್ರಭಾ ಯೋಜನೆಯ ಕಮಾಂಡ್ 11 ಲಕ್ಷ ಎಕರೆ ಇತ್ತು. ಅದರಲ್ಲಿ ಒಂದು ಲಕ್ಷ ಎಕರೆ ಪೂರ್ತಿ ಕಳೆದುಕೊಂಡೆವು. 10 ಲಕ್ಷಕಿಂತ ಕಮಾಂಡ್ ಏರಿಯಾ ಬರಬೇಕಾಗಿತ್ತು. ಅದರಲ್ಲಿ ನಮಗೆ ಇರ್ರಿಗೇಷನ್‌ಗೆ ಬರತಕ್ಕದ್ದು ಸುಮಾರು ಆರು ಲಕ್ಷ ಆದರೆ ಈ ಯೋಜನೆ ಪೂರ್ತಿ ಮುಗಿದರೆ ಈ ಮಾತು ಎಲ್ಲಿ ಜಲಾಶಯ ಕಟ್ಟಬೇಕಾಗಿತ್ತೋ ಆ ಪ್ರದೇಶ ಮಹಾರಾಷ್ಟ್ರಕ್ಕೆ ಸರ್ಕಾರ ಹೋದ ಕಾರಣ, ಅವರಿಂದ ನಮಗೆ ಸರಿಯಾದ ಸ್ಥಳ ಸಿಕ್ಕಲಿಲ್ಲ. ಆದ್ದರಿಂದ ಹಿಡಕಲ್ ಡ್ಯಾಮನ್ನು ಕಟ್ಟುವ ಯೋಜನೆ ಸರ್ಕಾರ ಕೈಕೊಂಡದ್ದು. ಇದು ಮೂರನೇ ಯೋಜನೆಯಲ್ಲಿ ಮುಗಿಯುತ್ತದೆ ಎಂದು ಭಾವಿಸಿದ್ದೆವು. ಆದರೆ ಇದು ಒಂದು ಹಂತಕ್ಕೆ ಬರಲಿಕ್ಕೆ ಇಲ್ಲ. ಅದರ ಫೌಂಡೇಷನ್ ಕೂಡ ಇದುವರೆಗೂ ಹಾಕಿಲ್ಲ ಎನ್ನುವುದು ಶೋಕಿಸತಕ್ಕ ಮಾತು ಆಗಿದೆ. ಅದರಲ್ಲಿ ಕೆಲವು ದೋಷಗಳು ಇವೆ. ಅನೇಕ ಕಾರಣಗಳಿಂದ ಮುಂದಕ್ಕೆ ಹಾಕುತ್ತಾ ಬಂದಿದ್ದಾರೆ. ಕಳೆದ ಸುಮಾರು 6-7 ವರ್ಷಗಳಿಂದ ಅಲ್ಲಿ ಅಸಂಖ್ಯಾತ ಸ್ಟಾಫ್ ಇಡಲಾಗಿದೆ. ಇದರ ಖರ್ಚನ್ನು ಯೋಜನೆ ಮೇಲೆ ಹೊರಿಸಿ ವಿನಾ ಕಾರಣ ಖರ್ಚು ಆಗುತ್ತಾ ಇದೆ.

ಸುಮಾರು ಪ್ರತಿ ವರ್ಷ 20-30 ಲಕ್ಷ ನೌಕರರ ಬಗ್ಗೆ ಖರ್ಚಿದೆ, ಯೋಜನೆಗೆ ಸಾಕಷ್ಟು ಖರ್ಚಾಗುತ್ತಿಲ್ಲ. ಹೀಗಾಗುತ್ತಿದ್ದರೆ ಈ ಯೋಜನೆಯಿಂದ ರೈತರಿಗೆ ಭಾರ ಹೆಚ್ಚಾಗುತ್ತಿದೆಯೇ ಹೊರತು ಸಾಕಾದಷ್ಟು ಪ್ರಯೋಜನವಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ನಾಲ್ಕನೆಯ ಯೋಜನೆಯಲ್ಲಾದರೂ ಈ ಯೋಜನೆಯನ್ನು ಪೂರ್ಣವಾಗಿ ಮುಗಿಸಲು ವ್ಯವಸ್ಥೆಮಾಡುವರೆಂಬ ನಿರೀಕ್ಷೆ ಇತ್ತು. ಆದರೆ, ಇದರಲ್ಲಿ ಪ್ರತಿ ವರ್ಷಕ್ಕೆ ಕೇವಲ 2 ಕೋಟಿ 40 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದೆ. ಮೊದಲನೆಯ ವರ್ಷ ಕೇಂದ್ರದಲ್ಲಿ ವಿದ್ಯಾಖಾತೆಗೆ ಖೋತ ಮಾಡುವ ಹಾಗೆ ಈ ವರ್ಷದ ಬಡ್ಜೆಟ್ಟಿನಲ್ಲಿ ಬಹಳ ಕಡಿಮೆ ಹಣ ಅಂದರೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದೆ, ಪೂರ್ಣ ಹಣ ಕೊಟ್ಟಿಲ್ಲ. ಇದು ಕೂಡ ಖರ್ಚಾಗುವುದೋ ಇಲ್ಲವೋ ಎಂಬ ಸ್ಥಿತಿ ಇದೆ. ಹೀಗಾಗಿ ಈ ಯೋಜನೆಯಿಂದ ಕೇವಲ ಸರಕಾರಿ ನೌಕರಿಗಾಗಿ ಸಂಬಳಕ್ಕೆ ಹೆಚ್ಚು ಹಣ ಹೋಗುತ್ತಿದೆಯೇ ಹೊರತು ಮತ್ತು ರೈತರಿಗೆ ಹೆಚ್ಚು ಭಾರ ಆಗುವ ಸಂಭವವಿದೆಯೇ ಹೊರತು ಯೋಜನೆ ತೀವ್ರವಾಗಿ ಆಗುವ ಭರವಸೆ ಇಲ್ಲ. ಮೊದಲನೆಯ ಹಂತದಲ್ಲಿ ಸುಮಾರು 18 ರಿಂದ 20 ಕೋಟಿ ರೂಪಾಯಿ ಖರ್ಚುಮಾಡಿದರೆ ಹಿಡಕಲ್ ಜಲಾಶಯ ಒಂದು ಹಂತಕ್ಕೆ ಬಂದು ಅದರಿಂದ ನೀರಿನ ಉಪಯೋಗಮಾಡಿಕೊಳ್ಳಲು ಸಾಧ್ಯವಾಗುತ್ತದೆ, ಅದು ಎಡ ದಂಡೆಯಿಂದ ಮಾತ್ರ. ಇಷ್ಟಾದರೆ ಸುಮಾರು ಎರಡೂವರೆ-ಮೂರು ಲಕ್ಷ ಎಕರೆಗಳಿಗೆ ನೀರು ಸಿಕ್ಕಬಹುದು. ಮಳೆಗಾಲದಲ್ಲಿ ನೀರು ಬಿಟ್ಟರೂ ರೈತರಿಗೆ ಲಾಭವಿಲ್ಲ. ಇದು ನೀರಾವರಿ ಯೋಜನೆಯೇ ಅಲ್ಲ ಘಟಪ್ರಭಾ ಬಗ್ಗೆ ಅನೇಕರು ಅಪಪ್ರಚಾರ ಮಾಡಿ ರೈತರಿಗೆ ಲಾಭವಿಲ್ಲದಂತಾಗಿದೆ. ಹೊರಗಡೆ ಕೇಳಿದರೆ ಘಟಪ್ರಭಾದಿಂದ ರೈತರಿಗೆ ನೀರೇ ಬೇಕಾಗಿಲ್ಲ, ಹಣ ಸುಮ್ಮನೆ ಖರ್ಚಾಗುತ್ತಿದೆ ಎಂದು ಅನೇಕರು ಹೇಳುತ್ತಾರೆ, ಇಲ್ಲಿ ಕೂಡ ಹೇಳಿದ್ದಾರೆ. ಉತ್ತರ ಕರ್ಣಾಟಕದಲ್ಲಿ ದೊಡ್ಡ ಯೋಜನೆ ಬೇಕಾಗಿಲ್ಲ, ರೈತರಿಗೆ ನೀರು ಬೇಕಾಗಿಲ್ಲ ಎಂದೂ ಹೇಳುತ್ತಿದ್ದಾರೆ. ಅಲ್ಲಿ ನೀರಾವರಿ ಸೌಲಭ್ಯ ಯಾವ ರೀತಿ ಇದೆ ಎಂಬುದನ್ನು ಪೂರ್ಣವಾಗಿ ತಿಳಿಯದೆ ಅನೇಕರು ಹೀಗೆ ಹೇಳುವುದುಂಟು.

ಇದನ್ನು ವಿಚಾರಮಾಡಬೇಕು. ಮಳೆಗಾಲದಲ್ಲಿ ನೀರನ್ನು ಬಿಟ್ಟರೆ ನೀರಾವರಿ ಬೆಳೆ ಮಾಡಲು ಸಾಧ್ಯವೆ ಎಂದು ನೋಡಬೇಕು. ಅಲ್ಲಿ ಡ್ರೈ ಕ್ರಾಪ್, ಜೋಳ, ಮುಸುಕಿನ ಜೋಳ ಹತ್ತಿ ಬೆಳೆಯಬಹುದು. ಒಂದು ವೇಳೆ ನೀರು ಹರಿಸಿದಾಗ ಒಂದೆರಡು ದಿವಸ ಸತತವಾಗಿ ಮಳೆ ಬಿದ್ದರೆ ಪೂರ್ಣವಾಗಿ ಬೆಳೆ ನಷ್ಟವಾಗುತ್ತದೆ; ಇನ್ನೊಂದು ಬೆಳೆ ಕೂಡ ಮಾಡದೆ ಕೂಡುವ ಪರಿಸ್ಥಿತಿ ಬರುತ್ತದೆ. ಆ ಕ್ಷೇತ್ರದಲ್ಲಿ ಮುಂಗಾರು ಬೆಳೆ ಮಾಡಿದರೂ ರೈತ ನಷ್ಟ ಹೊಂದಿ ಹಾನಿಯಾಗುವ ಪ್ರಸಂಗವಿದೆ. ಯೋಜನೆ ಪೂರ್ಣವಾಗುವವರೆಗೆ ಹಾನಿ ಇದೆ. ಅಲ್ಲಿ ರೈತರಿಗೆ ಒಳ್ಳೆಯ ನೀರಾವರಿ ಅನುಭವವಿದೆ ಮತ್ತು ಚೆನ್ನಾಗಿ ದುಡಿಯುತ್ತಿದ್ದಾರೆ. ಸಾಕಾದಷ್ಟು ಇರುವ ಅನುಕೂಲದಲ್ಲೇ ಲಾಭ ಪಡೆಯುತ್ತಿದ್ದಾರೆ. ಈಗ ಕೇವಲ 12 ಕೋಟಿ ರೂಪಾಯಿ ಯೋಜನೆಯಲ್ಲಿ ರೈತರಿಗೆ ಲಾಭವಾಗುವುದಿಲ್ಲ. ಸುಮಾರು 20 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಿದರೆ ಒಂದು ನೀರಾವರಿ ಮಟ್ಟ ಬರಬಹುದು, ಇದರ ಜೊತೆಗೆ ಯಾವ ಬಲದಂಡೆ ಯೋಜನೆಯಿತ್ತು ಅದರಲ್ಲಿ ಈಗಾಗಲೇ ಒಂದು ಲಕ್ಷ ಎಕರೆ ಕ್ಷೇತ್ರ ಕಡಮೆಯಾಗಿದೆ. ಇದಕ್ಕೆ ಕಾರಣ ಪ್ರಾಂತೀಕರಣ. ಮಹಾರಾಷ್ಟ್ರಕ್ಕೆ ಕೆಲವು ಪ್ರಾಂತ ಹೋಗಿ ಹೀಗೆ ಕಡಮೆಯಾಗಿದೆ. ಜೊತೆಗೆ ಇನ್ನೂ ವರೆಗೆ ಇಷ್ಟೆಲ್ಲಾ ನೀರಾವರಿ ಸಿಕ್ಕಬೇಕಾದ್ದರಲ್ಲಿ 6-7 ವರ್ಷಗಳಿಂದ ಹಿಂದಿದ್ದೇವೆ. ಹೀಗಾಗಿ ಅಲ್ಲಿಯ ಜನರಿಗೆ ತೊಂದರೆಯಾಗುತ್ತಿದೆಯೇ ಹೊರತು ಲಾಭವಾಗಿಲ್ಲ. ಇನ್ನೂ ಕೆಲವು ಸರಕಾರಿ ಯೋಜನೆಗಳಿಂದ ಈ ಭಾಗದವರಿಗೆ ಮತ್ತೂ ನಷ್ಟವಾಗಿದೆ. ಸರಕಾರ ಅನೇಕ ಸರ್ಕ್ಯುಲರ್‌ಗಳನ್ನು ಕಳಿಸುತ್ತಿದೆ, ಅದರ ಪ್ರಕಾರ ದೊಡ್ಡ ನೀರಾವರಿ ಯೋಜನೆ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಯೋಜನೆ ತೆಗೆದುಕೊಳ್ಳುವಂತಿಲ್ಲ. ಇದರಿಂದಾಗಿ ಸಣ್ಣ ಯೋಜನೆಯೂ ಇಲ್ಲ, ದೊಡ್ಡದೂ ಇಲ್ಲ, ಹೀಗಾಗಿ ರೈತರಿಗೆ ಯೋಜನೆಯಿಂದ ಯಾವ ಲಾಭವೂ ಇಲ್ಲ. ಆ ಭಾಗದ ಜನರಿಗೆ ಇನ್ನೂ ಬರಗಾಲವೇ ಇದೆ 8-10 ವರ್ಷಗಳಾದರೂ ಯೋಜನೆಯಾಗದೆ ಬರಗಾಲದಲ್ಲೇ ಇರುವ ಪ್ರಸಂಗವಿದೆ. ಹೀಗೆ ಯೋಜನೆ ವಿಳಂಬವಾಗುವುದರಿಂದ ಹೆಚ್ಚು ಹಾನಿಯೇ ಹೊರತು ಲಾಭವಾಗುವುದಿಲ್ಲ. ಇದೇ ಪ್ರಕಾರ ಮಲಪ್ರಭ ಯೋಜನೆ ವಿಷಯದಲ್ಲೂ ಆಗಿದೆ. 3.4 ವರ್ಷಗಳಿಂದ ಸಾಕಾದಷ್ಟು ಸಿಬ್ಬಂದಿ ಇದೆ, ಫೌಂಡೇಷನ್ ಸ್ಟೋನ್ ಹಾಕಿ ಬಹಳ ದಿನಗಳಾದರೂ ಕೆಲಸವಾಗಿಲ್ಲ. ಈಗ ಸ್ವಲ್ಪ ಕೆಲಸ ಪ್ರಾರಂಭವಾಗುವ ಸ್ಥಿತಿ ಇದೆ. ಇದರಿಂದ ರೈತರು ಹೆಚ್ಚುವ ಸಂಭವವಿದೆ. ಯಾವ ಯೋಜನೆಯಾಗಲಿ ಸಿಬ್ಬಂದಿಗೆ ಸಂಬಳ ಕೊಟ್ಟುಕೊಂಡು ಹೆಚ್ಚು ಕಾಲ ತಳ್ಳುವುದಕ್ಕಿಂತ ಬೇಗ ಯೋಜನೆ ಕೆಲಸ ಪೂರ್ಣಮಾಡಿದರೆ ಅದರಿಂದ ರೈತರಿಗೆ ಹೆಚ್ಚು ಲಾಭವಾಗುತ್ತದೆಂದು ಹೇಳುತ್ತೇನೆ.

ಪವರ್ ವಿಚಾರ ತೆಗೆದುಕೊಂಡರೆ ಅದನ್ನೂ ಖೋತಮಾಡಲಾಗಿದೆ, ಹದಿನೇಳೂವರೆ ಕೋಟಿ ರೂಪಾಯಿಗಳನ್ನು ಆ ಬಾಬಿನಲ್ಲಿ ಕಡಮೆ ಮಾಡಲಾಗಿದೆ. ಇದರಿಂದ ರೈತರಿಗೆ ಇರಿಗೇಷನ್ ಪಂಪುಸೆಟ್ಟು ಕೊಡುವುದು, ಸಾಕಾದಷ್ಟು ವಿದ್ಯುತ್ ಒದಗಿಸುವುದು, ಇತರ ಸೌಲಭ್ಯ ಒದಗಿಸುವುದು ಮುಂತಾದ ವಿಚಾರಗಳಲ್ಲಿ ತೊಂದರೆಯಾಗಬಹುದು. ಇದಲ್ಲದೆ ವಿಲೇಜ್ ಇಂಡಸ್ಟ್ರಿ ಮತ್ತು ಸ್ಮಾಲ್ ಇಂಡಸ್ಟ್ರಿಗಳಿಗೆ ಬೇಕಾಗಿರುವ ಹಣ ಕಡಮೆ ಮಾಡಲಾಗಿದೆ, 247 ಲಕ್ಷ ರೂಪಾಯಿ ಕಡಮೆಮಾಡಲಾಗಿದೆ. ಆದರೆ ರಸ್ತೆಗಳಿಗೆ ಹೆಚ್ಚು ಹಣ ಕೊಡಲಾಗಿದೆ, 28 ನೂರು ಲಕ್ಷ ಕೊಡಲಾಗಿದೆ, ಇದರಿಂದ 3 ಕೋಟಿ ರೂಪಾಯಿ ಹೆಚ್ಚು ದೊರೆಯುವುದು. ಆದರೆ ಸುಮ್ಮನೆ ಎಲ್ಲಾ ಕಡೆ ರಸ್ತೆ ಮಾಡುವುದರಿಂದ ಪ್ರಯೋಜನವಿಲ್ಲ ಎಂಬ ಭಾವನೆ ಕೆಲವರಲ್ಲಿದೆ. ಇಂದಿನ ಸಮಾಜದಲ್ಲಿ ಪ್ರತಿ ಹಳ್ಳಿಗೂ ರಸ್ತೆ ಮಾಡಬೇಕಾಗಿದೆ, ಪ್ರತಿ ಹಳ್ಳಿಗೂ ಒಂದಾದರೂ ರಸ್ತೆ ಇಲ್ಲದಿದ್ದರೆ ಸಾರಿಗೆ ಸಂಪರ್ಕವಿಲ್ಲದಿದ್ದರೆ ಯಾವುದೇ ರೀತಿಯ ಸೌಕರ್ಯ ಸಿಕ್ಕುವುದಿಲ್ಲ, ಬೆಳೆದ ಮಾಲನ್ನು ಸಾಗಿಸುವುದಕ್ಕೆ ಅಥವಾ ವ್ಯವಸಾಯ ಮುಂತಾದ ಕೆಲಸಗಳಿಗೆ ಬೇಕಾದ ಸಾಮಗ್ರಿಗಳನ್ನು ತರುವುದಕ್ಕೆ, ವ್ಯಾಪಾರ ಮುಂತಾದ ಕೆಲಸಗಳಿಗೆ ರಸ್ತೆ ಸೌಕರ್ಯ ಅವಶ್ಯಕ. ರೈತರಿಗೆ ಸೌಲಭ್ಯ ದೊರೆಯಬೇಕಾದರೆ ರಸ್ತೆ ಅವಶ್ಯಕ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಪ್ರತಿಯೊಂದು ಊರಿಗೂ ಒಂದಾದರೂ ರಸ್ತೆ ಮಾಡಬೇಕು, ಹಾಗೆ ಮಾಡಿದರೆ ಹಳ್ಳಿಗಾಡಿನವರಿಗೆ ಉತ್ತಮವಾದ ಸೌಲಭ್ಯ ದೊರಕಿಸಿದಂತಾಗುತ್ತದೆ. ಮದ್ರಾಸಿನಲ್ಲಿ ಪ್ರತಿಯೊಂದು ಊರಿಗೂ ಒಂದಾದರೂ ರಸ್ತೆ ಮಾಡಿದ್ದಾರೆ, ಈ ವಿಚಾರದಲ್ಲಿ ನಾವು ಹಿಂದುಳಿದಿದ್ದೇವೆ. ನಮ್ಮ ಕಡೆ ಒಂದು ತಾಲ್ಲೂಕಿನಲ್ಲಿರುವ ಸುಮಾರು 110 ಹಳ್ಳಿಗಳಲ್ಲಿ 30-40 ಹಳ್ಳಿಗಳಿಗೆ ಒಂದಾದರೂ ರಸ್ತೆಯಿಲ್ಲ. ಹಾಗೆ ಆ ಭಾಗ ಹಿಂದುಳಿದಿದೆ. ಅಲ್ಲಿಗೆ ಯಾವ ರೀತಿಯ ಸೌಲಭ್ಯವನ್ನೂ ಕೊಡುವುದಕ್ಕಾಗಿಲ್ಲ. ಈ ರೀತಿಯಾದರೆ ಜನರಿಗೆ ಕಷ್ಟ. ಇದಕ್ಕೆಲ್ಲಾ ಯೋಜನೆಯಲ್ಲಿ ಅವಕಾಶ ಮಾಡದಿದ್ದರೆ ಜನರಿಗೆ ಯಾವ ಸೌಲಭ್ಯವೂ ಸಿಕ್ಕುವುದಿಲ್ಲ. ಮುಖ್ಯವಾಗಿ ಜನರಿಗೆ ಶಿಕ್ಷಣ, ಸರಿಯಾದ ಸಾರಿಗೆ ಸಂಪರ್ಕ ಸೌಕರ್ಯ, ಅನ್ನ ಬಟ್ಟೆ ವಸತಿ ಇವುಗಳ ವ್ಯವಸ್ಥೆ ಮಾಡಿದರೆ ಯೋಜನೆ ಯಶಸ್ವಿಯಾಗುತ್ತದೆ ಮತ್ತು ಮುಂದೆ ಪ್ರಗತಿ ಸಾಧನೆಯಾಗುತ್ತದೆ. ಶಿಕ್ಷಣ ವಿಚಾರದಲ್ಲಿ ಸಾಕಷ್ಟು ವ್ಯವಸ್ಥೆ ಮಾಡಿಲ್ಲ.

(ಶ್ರೀ ಎ. ಆರ್. ಪಂಚಗಾವಿ)

ಇನ್ನೂ ಹೆಚ್ಚಿನ ವ್ಯವಸ್ಥೆಯಾಗಬೇಕಾಗಿದೆ. ಇದಕ್ಕೆ ಹೆಚ್ಚು ಹಣ ಒದಗಿಸಲಾಗಿದೆ. ಮುಖ್ಯವಾಗಿ ಎಲ್ಲ ಮಕ್ಕಳಿಗೆ ಶಿಕ್ಷಣ ದೊರೆಯಬೇಕಾದ ಗುರಿ ಇರಬೇಕು. ಇದು ನಾಲ್ಕನೇ ಯೋಜನೆಯಲ್ಲಿ ಕಾರ್ಯಗತವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ನಮ್ಮ ರಾಜ್ಯದಲ್ಲಿ ಪುಕ್ಕಟೆ ಮಾಧ್ಯಮಿಕ ಶಿಕ್ಷಣ ದೊರೆಯುವಂತೆ ಮಾಡಿ ಒಂದು ಪ್ರಗತಿಪರ ಹೆಜ್ಜೆ ಇಟ್ಟಿದ್ದಾರೆ. ಇದರಿಂದ ಎಲ್ಲ ಮಕ್ಕಳಿಗೆ ಶಿಕ್ಷಣ ಸೌಲಭ್ಯ ಸಿಕ್ಕುವಂತೆಯಾಗುತ್ತದೆಂದು ನಾನು ಭಾವಿಸುತ್ತೇನೆ. ಹೈಸ್ಕೂಲುಗಳ ವಿಚಾರವಲ್ಲಿ ಹೇಳುವುದಾದರೆ ಅನೇಕ ಕಡೆ ಸಾರ್ವಜನಿಕರು ಮುಂದೆ ಬಂದು ಹೈಸ್ಕೂಲುಗಳನ್ನು ತೆರೆಯುತ್ತಿದ್ದಾರೆ. ಇವುಗಳ ಆಡಳಿತ ಸುಧಾರಣೆ ಆಗದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ಇವುಗಳಿಗೆ ಕೊಡುವ ಗ್ರಾಂಟು ಸಕಾಲಕ್ಕೆ ದೊರೆಯುವುದಿಲ್ಲ. ವರ್ಷದ ಕೊನೆಗೆ ಅಂದರೆ ಮಾರ್ಚ್ 28 ರಿಂದ 31ನೇ ತಾರೀಖಿಗೆ ಪ್ರತಿಯೊಂದು ಹೈಸ್ಕೂಲಿನ ಹೆಡ್ ಮಾಸ್ಟರರು, ಕಾಲೇಜು ಪ್ರಿನ್ಸಿಪಾಲರು ಸಂಘ ಸಂಸ್ಥೆಗಳ ಮುಖ್ಯಸ್ಥರು ಬೆಂಗಳೂರಿನಲ್ಲಿ ಇರುವದು ಕಂಡು ಬರುತ್ತದೆ. ಈ ಎರಡು ಮೂರು ದಿವಸಗಳಲ್ಲಿ ಹಣ ತೆಗೆದುಕೊಳ್ಳದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಗ್ರಾಂಟನ್ನು ಸರಿಯಾಗಿ ಸಕಾಲದಲ್ಲಿ ಕೊಡದೇ ಇರುವುದರಿಂದ ಜನರಿಗೆ ತೊಂದರೆಯಾಗಿದೆ. ಇದಲ್ಲದೆ ಹಣದ ಹೆಚ್ಚಿನ ಭಾಗ ಪ್ರವಾಸಕ್ಕಾಗಿ ಖರ್ಚಾಗುತ್ತದೆ. ಅನೇಕ ಕಮಿಟಿ ಕಾನ್‌ಫರನ್ಸ್ ಸೆಮಿನಾರ್ ಕರೆಯುತ್ತಾರೆ. ದಿನ ನಿತ್ಯ ಇದೊಂದು ಕೆಲಸವಾಗಿದೆ. ಇದರಿಂದ ಸಂಘ ಸಂಸ್ಥೆಗಳನ್ನು ನಡೆಸುವುದು ಕಷ್ಟವಾಗಿದೆ. ಇದರಿಂದ ಸರ್ಕಾರದ ಕೆಲಸಕ್ಕೂ ಅಡಚಣೆ ಬರುತ್ತದೆ. ಮೇಲಿಂದ ಮೇಲೆ ಸಭೆ ಸಮ್ಮೇಳನ ಮಾಡುವುದರಿಂದ ಅವರಿಗೆ ಅಷ್ಟೊಂದು ಅನುಕೂಲವಾಗುವುದಿಲ್ಲ. ಅವರಿಗೆ ಏನಾದರೂ ತಿಳಿಸುವುದು ಇದ್ದರೆ ಒಂದು ಪರಿಪತ್ರ ಸರ್ಕ್ಯೂಲರ್ ಹೊರಡಿಸಿ ಇಂಥ ಕೆಲಸ ಮಾಡಬೇಕು ಎಂದು ಹೇಳಿದರೆ ಸಾಕು. ಟ್ರೈನಿಂಗ್ ಕ್ಲಾಸು ತೆಗೆದು ಹಾಗೆ ಎಲ್ಲರೂ ಸಭೆಗೆ ಬಂದು ಕಲಿತು ಹೋಗಬೇಕು ಎಂದು ಹೇಳುವುದು ಸರಿಯಲ್ಲ. ಇದು ಬೆಂಗಳೂರಿನಲ್ಲಿ ಅಷ್ಟೇ ನಡೆಯುತ್ತದೆ ಎಂದು ಅಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತಿಯೊಂದು ಡಿವಿಜನ್ನಿನಲ್ಲಿ ಎಲ್ಲಾ ಮಟ್ಟದಲ್ಲಿ ಇಂಥ ವ್ಯವಸ್ಥೆ ನಡೆಯುತ್ತಿದೆ. ಇದರಿಂದ ಸಂಘ ಸಂಸ್ಥೆಗಳ ಹಣ, ಕೋಆಪರೇಟೀವ್ ಸೊಸೈಟಿಗಳ ಹಣ ಪಂಚಾಯತಿಗಳ ಹಣ ಬಹಳಷ್ಟು ಖರ್ಚಾಗುತ್ತಿದೆ. ಈ ವ್ಯವಸ್ಥೆ ಆದಷ್ಟು ಬೇಗ ಸುಧಾರಣೆಯಾದರೆ ಒಳ್ಳೆಯದು. ಈಗಿನ ಸಂದರ್ಭದಲ್ಲಿ ಸಂಘ ಸಂಸ್ಥೆಗಳಿಗೆ ಕೋ-ಆಪರೇಟಿವ್ ಸೊಸೈಟಿಗಳಿಗೆ ಪಂಚಾಯತಿ ಸಂಸ್ಥೆಗಳಿಗೆ ಹೆಚ್ಚೆಚ್ಚು ಹಣ ಕೊಡಲಾಗುತ್ತಿದೆ. ಆದರೆ ಇವುಗಳಮೇಲೆ ಆಡಿಟ್ ಬಿಗುವು ಬಹಳ ಕಡಿಮೆಯಾಗಿದೆ ಎಂದು ಹೇಳಬಹುದು. ಸರಿಯಾದ ಆಡಿಟ್ ಬಿಗುವು ಇಲ್ಲದಮೂಲಕ ನಾಲ್ಕೈದು ವರ್ಷಗಳಲ್ಲಿ ಹಣ ಮಿಸ್ ಅಪ್ರೋಪ್ರಿಯೇಷನ್ ಆದುದು ಅನೇಕಸಲ ಬೆಳಕಿಗೆ ಬರುವುದಿಲ್ಲ. ಈ ರೀತಿ ನಡೆಯುವುದರಿಂದ ಜನರಿಗೆ ಎಷ್ಟು ಲಾಭ ದೊರೆಯಬೇಕೋ ಅಷ್ಟು ಲಾಭ ಸಿಕ್ಕುತ್ತಿಲ್ಲ. ಈ ಯೋಜನೆಯಲ್ಲಿ ಇದರಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡದೇ ಹೋದರೆ ಜನರಿಗೆ ತೊಂದರೆಯಾಗತ್ತದೆ. ಅನೇಕ ಪಂಚಾಯತಿಗಳು ಒಂದು ಸಭೆಯನ್ನು ಕೂಡ ಇದುವರೆಗೆ ಕರೆದಿಲ್ಲ. ಅವರಿಗೆ ಗ್ರಾಂಟು ಹೇಗೆ ಸಿಕ್ಕುತ್ತದೆ. ಅವರಿಂದ ಯೋಜನೆ ಕೆಲಸ ಹೇಗೆ ನಡೆಯುತ್ತದೆ ? ಬಹಳ ಕೆಲಸ ಮಾಡಬೇಕೆಂದು ಅಪೇಕ್ಷೆ ಇರುತ್ತದೆ. ಆದರೆ ಗ್ರಾಂಟು ಎಷ್ಟು ಸಿಕ್ಕಿದೆ, ಯಾವ ಯಾವ ಕೆಲಸ ಮಾಡಬೇಕು ಎಂಬುದನ್ನು ಚರ್ಚಿಸುವುದಕ್ಕೆ ಮೀಟಿಂಗ್ ಕರೆಯದೇ ಇದ್ದರೆ ಏನು ಪ್ರಯೋಜನವಾಗುತ್ತದೆ ? ಹಣ ಕೊಟ್ಟಮೇಲೆ ಆಡಿಟ್ ಮಾಡದೇ ಇದ್ದರೆ ಸರಿಯಾದ ಸೂಪರ್‌ವಿಜನ್ ಇಲ್ಲದೇ ಇದ್ದರೆ ಕೆಲಸ ಹೇಗೆ ನಡೆಯುತ್ತವೆ ? ಸರಿಯಾದ ಬಿಗಿ ಇಟ್ಟುಕೊಂಡು ಆಡಳಿತ ಹಿಡಿತದಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಜನರಿಗೆ ಹಾನಿಯಾಗುತ್ತದೆ, ಲಾಭವೇನೂ ಆಗುವುದಿಲ್ಲ. ಆದುದರಿಂದ ಕೋಆಪರೇಟಿವ್ ಸೊಸೈಟಿಗಳ ಮೇಲೆ, ಪಂಚಾಯತಿಗಳಮೇಲೆ ಅನೇಕ ಸಂಘ ಸಂಸ್ಥೆಗಳಮೇಲೆ ಸರಿಯಾದ ಸೂಪರ್‌ವಿಜನ್ ಆಡಿಟ್ ಬಿಗುವು ಇಡುವ ಒಂದು ವ್ಯವಸ್ಥೆ ಮಾಡಬೇಕು. ಇದನ್ನು ಬಹಳ ಅವಶ್ಯಕವಾಗಿ ಮಾಡಬೇಕು ಎಂಬ ಒಂದು ಮಾತನ್ನು ಹೇಳುತ್ತೇನೆ.

ಕೊನೆಯದಾಗಿ ಒಂದು ವಿಷಯ ಹೇಳಬೇಕಾಗಿದೆ. ಇದುವರೆಗೆ ಆಡಳಿತದ ಬಗ್ಗೆ ಹೇಳಿದೆ. ಮುಖ್ಯವಾಗಿ 100ರಲ್ಲಿ 80ರಷ್ಟು ಜನಕ್ಕೆ ಹಿತವಾಗಬೇಕಾದರೆ ಒಕ್ಕಲತನಕ್ಕೆ ಪ್ರಾಧಾನ್ಯ ಕೊಡಬೇಕು ಅಂದರೆ ಅವರ ಕಲ್ಯಾಣವಾಗುತ್ತದೆ. ಇವರ ಬಗ್ಗೆ ಬಹಳ ಅನ್ಯಾಯ ನಡೆದಿದೆ ಎಂದು ಹೇಳದೆ ಗತ್ಯಂತರವಿಲ್ಲ. ಯಾವ ಯೋಜನೆ ಮಾಡಲಿ ಇವರಮೇಲೆ ಎಷ್ಟು ಅನ್ಯಾಯ ಎಷ್ಟು ದ್ರೋಹವಾಗುತ್ತಿದೆ ಎಂಬುದನ್ನು ನಾವು ನೋಡಬೇಕು. ಅನೇಕ ಅನುವಂಶಿಕ ಹುದ್ದೆಗಳನ್ನು ರದ್ದು ಮಾಡಿದ್ದಾರೆ ಹಳ್ಳಿಗಳಲ್ಲಿದ್ದ ಕುಲಕರ್ಣಿಯವರು ಹೊರಟು ಹೋದರು. ಅವರ ಸ್ಥಳದಲ್ಲಿ ಸರಕಾರೀ ನವಕರರಾದ ತಲಾಟಿಗಳು ಬಂದಿದ್ದಾರೆ. ಇನ್ನು ಪಟೇಲರು ಹೋಗುವವರು ಇದ್ದಾರೆ. ಆಡಳಿತದಲ್ಲಿ ಬಿಗಿ ಇಲ್ಲದ

ಮೂಲಕ ರೈತನಿಗೆ ಬಹಳ ತೊಂದರೆಯಾಗಿದೆ. ಲೆಕ್ಕಪತ್ರದಲ್ಲಿ ರೈತನ ಹೆಸರು ಉಳಿಯುತ್ತದೆ ಎಂಬುದಕ್ಕೆ ಭರವಸೆಯಿಲ್ಲ. ಈ ಹೊಸ ನವಕರರಾದ ತಲಾಟಿಗಳು ದಕ್ಷತೆಯಿಂದ ಲೆಕ್ಕ ಪತ್ರ ಬರೆಯದೇ ಇರುವುದರಿಂದ ರೈತರು ತೊಂದರೆ ಅನುಭವಿಸಬೇಕಾಗುತ್ತದೆ, ಈ ವಿಚಾರದಲ್ಲಿ ಬಹಳ ಅವ್ಯವಸ್ಥೆ ಉಂಟಾಗಿದೆ. ಇದಲ್ಲದೆ ಲಂಚಗುಳಿತನ ಹೆಚ್ಚಾಗಿರುವುದನ್ನು ನೋಡಿದರೆ ರೈತನಿಗೆ ಸುಖ ಸಿಕ್ಕುವುದಿಲ್ಲ. ಯೋಜನೆಯ ಪೂರ್ತಿ ಲಾಭ ರೈತನಿಗೆ ಸಿಕ್ಕುವುದಿಲ್ಲ. ಇದನ್ನು ಮರೆಯಬಾರದು. ಶ್ಯಾನುಭೋಗರು ಹೋದರು, ಇನ್ನು ಪಟೇಲರು ಹೋದಮೇಲೆ ಒಂದು ಸರಿಯಾದ ವ್ಯವಸ್ಥೆ ಮಾಡದೆ ಇದ್ದರೆ ಹೆಚ್ಚಿನ ಅನ್ಯಾಯವಾಗಬಹುದು ಎಂಬುದನ್ನು ಮರೆಯಬಾರದು. ಈ ಬಗ್ಗೆ ಒಂದು ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡದೇ ಇದ್ದರೆ ಹಳ್ಳಿಗಳಲ್ಲಿಯ ಆಡಳಿತ ವ್ಯವಸ್ಥೆ ಕೆಟ್ಟುಹೋಗಿ ಯೋಜನೆಗಳು ತಲೆಕೆಳಗಾಗುವ ಪರಿಸ್ಥಿತಿ ಬರುತ್ತದೆ. ರೈತನಿಗೆ ಪ್ರಫತಿಲ ದೊರೆಯದೇ ಇದ್ದರೆ ಯಾವ ಯೋಜನೆ ಮಾಡಿದರೂ ಪ್ರಯೋಜನವಿಲ್ಲ. ಈ ಯೋಜನೆಗಳಿಂದ ಕೆಲವು ಜನರು ಹೆಚ್ಚಿನ ಅಧಿಕಾರ ಪಡೆದು ಹೆಚ್ಚು ದುಡ್ಡು ಸಂಪಾದನೆ ಮಾಡಿಕೊಳ್ಳಲು ಸಾಧ್ಯವಾಗಿದೆ, ಇದು ಸರಿಯಲ್ಲ. ಈ ಯೋಜನೆಗಳ ಮೂಲಕ ನಾವು ಒಂದು ಸೆಕ್ಯೂಲರ್‌ಸ್ಟೇಟ್ ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡಬೇಕು, ಸಮಾಜವಾದೀ ಸಮಾಜ ರಚನೆ ಮಾಡಬೇಕು ಎಂದು ಹೊರಟಿದ್ದೇವೆ. ನಮ್ಮ ಈ ಮುಖ್ಯವಾದ ಗುರಿ ಮರೆಯಬಾರದು. ಇಲ್ಲದಿದ್ದರೆ ಅಪವಾದ ಬರುತ್ತದೆ. ಸರಕಾರ ಕಂಟ್ರಾಕ್ಟರರನ್ನು ಬೆಳೆಸುತ್ತಿದ್ದಾರೆ, ಬಂಡವಾಳ ಶಾಹಿ ಬೆಳೆಸುತ್ತಿದ್ದಾರೆ ಎಂದು ಜನ ಆಡಿಕೊಳ್ಳುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕು. ಬಂಡವಾಳಗಾರರಿಗೆ ಪ್ರೋತ್ಸಾಹ ಸಿಗದಂತೆ ಮಾಡಬೇಕು ಮತ್ತು ನಮ್ಮ ಗುರಿ ಮುಟ್ಟಲು ಸಮೀಪ ದಾರಿ ಹಿಡಿಯಬೇಕು. ಮುಖ್ಯವಾಗಿ ನಾವು ಭೂ ಸುಧಾರಣೆ ಮಾಡಬೇಕೆಂದಿದ್ದೇವೆ. ಅನೇಕ ಸುಧಾರಣೆಗಳನ್ನು ತೀವ್ರಗತಿಯಿಂದ ಮಾಡುವುದು ಅವಶ್ಯಕವಾಗಿದೆ. ಬಹಳ ದಿವಸದಿಂದ ಭೂ ಸುಧಾರಣೆಯಾಗಬೇಕಾಗಿದೆ. ಇದರಿಂದ ಒಕ್ಕಲತನಕ್ಕೆ ಅನುಕೂಲವಾಗುತ್ತದೆ. ಬಡ ಕೂಲಿಗಾರರಿಗೆ ಜೀವನ ಸಾಗಿಸಲು ಅನುಕೂಲವಾಗುತ್ತದೆ. ಇದುವರೆಗೆ ಭೂ ಸುಧಾರಣೆಯಲ್ಲಿ ಯಾವ ಬದಲಾವಣೆ ಮಾಡಲು ಸಾಧ್ಯವಾಗಿಲ್ಲ. ಯಾರು ಜಮೀನಿನಲ್ಲಿ ಕಷ್ಟಪಟ್ಟು ದುಡಿಯುತ್ತಾನೆಯೋ ಅವನಿಗೆ ಆ ಜಮೀನಿನ ಒಡೆತನದ ವಿಷಯದಲ್ಲಿ ಭರವಸೆ ಇಲ್ಲದೆ ಇದ್ದರೆ, ಅವನಿಗೆ ಯಾವುದೇ ತರಹ ಸೌಕರ್ಯ ಸಿಕ್ಕುವುದಿಲ್ಲ, ತಕಾವಿ ಸಾಲ ಸಿಕ್ಕುವುದಿಲ್ಲ, ಸೊಸೈಟಿಯಿಂದ ಸಾಲ ಸಿಕ್ಕುವುದಿಲ್ಲ. ಯಾವತ್ತಿಗೂ ದೊಡ್ಡ ದೊಡ್ಡ ರೈತರಿಗೆ, ಬಂಡವಾಳಗಾರರಿಗೆ ಈ ಸೌಕರ್ಯ ಸಿಕ್ಕುತ್ತದೆ. ಅತ್ಯಂತ ಬಡವರಿಗೆ ಏನೂ ಮುಟ್ಟುವುದಿಲ್ಲ. ಯಾವುವೇ ಯೋಜನೆಯನ್ನು ಮಾಡಲಿ ಆ ಯೋಜನೆಯಿಂದ ಮಹಾತ್ಮ ಗಾಂಧಿಯವರು ಹೇಳುತ್ತಿದ್ದ ಹಾಗೆ ಗುಡಿಸಿಲನಲ್ಲಿರುವ ಜನ ಅತ್ಯಂತ ದಟ್ಟ ದರಿದ್ರರಾದ ಜನ ಇವರಿಗೆ ಸಹಾಯ ಮುಟ್ಟುವಂತೆ ಆಗಬೇಕು, ಅದನ್ನು ಮರೆಯಬಾರದು. ಅದನ್ನು ಮರೆತರೆ ನಮ್ಮ ಯೋಜನೆಗಳು ಯಶಸ್ವಿಯಾಗಲಾರವು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ELECTION TO THE COMMITTEE ON PRIVATE MEMBERS BILLS AND RESOLUTION—RESULTS.

Mr. SPEAKER.—I have to make an announcement, in connection with the elections to the Committee on Private Members Bills and Resolutions. As the number of candidates is equal to the number required, there will be no elections. The following Members are declared elected and there will be no polls :

Sriyuths :—

1. S. V. Agnihotri.
2. B. Channabyre Gowda.
3. K. M. Deviah.
4. A. J. Doddameti.
5. J. L. Kabadi.
6. S. Kolkebail.